# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 Volume:03 • ಸಂಚಿಕೆ: 08 Issue: 08 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 29.06.2025 29.06.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



Grow with Us, Advertise in Hampi Times
Print & Digital Media



"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com









ಜು.1 ರಿಂದ ಎಸ್ಸೆಸ್ಸೆಲ್ಸಿ ಪ್ರಶ್ನೋತ್ತರ ಸರಣಿ

ನಿಮ್ಮ ಹಂಪಿ ಟೈಮ್ಸ್‌ನಲ್ಲಿ..

ಪ್ರತಿಗಳಿಗಳಿಗಾಗಿ ನಿಮ್ಮ ಸಮೀಪದ ಪತ್ರಿಕೆ ವಿತರಕರನ್ನು ಸಂಪರ್ಕಿಸಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


# ಸೃಜನಾತ್ಮಕ ಕಲಿಕಾ ಕೇಂದ್ರಗಳನ್ನಾಗಿ ಪರಿವರ್ತಿಸಿ ಕಲಿಕಾ ಕೊಠಡಿ ಲವಲವಿಕೆಯಿಂದ ಕೂಡಿರಲಿ

## ಯೋಜನಾಧಿಕಾರಿ ಟಿ.ಎನ್.ಕೃಷ್ಣಮೂರ್ತಿ ಹೇಳಿಕೆ | ಶಿಕ್ಷಕರಿಗೆ "ಕಲಿಕಲಿಸು" ತರಬೇತಿ ಸಮಾರೋಪ

■ **ಹಂಪಿ ಟೈಮ್ಸ್ ಹೊಸಪೇಟೆ**

ಶಾಲಾ ಕೊಠಡಿಗಳನ್ನು ಸೃಜನಾತ್ಮಕ ಕಲಿಕಾ ಕೇಂದ್ರಗಳನ್ನಾಗಿ ಪರಿವರ್ತಿಸಿ, ವಿದ್ಯಾರ್ಥಿಗಳನ್ನು ಹೊರಜಗತ್ತಿನೊಂದಿಗೆ ಬೆಸೆಯುವ ಉದ್ದೇಶದಿಂದ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್ (IFA) ಸಂಸ್ಥೆಯು ರಾಜ್ಯದ ಸರ್ಕಾರಿ ಶಾಲಾ ಶಿಕ್ಷಕರಿಗೆ ಕಲಾ ಪ್ರಕಾರಗಳ ಮುಖಾಂತರ ತರಬೇತಿ ನೀಡುತ್ತಿದೆ ಎಂದು ಕಲಿಕಲಿಸು ಯೋಜನೆಯ ಕಾರ್ಯಕ್ರಮದ ಯೋಜನಾಧಿಕಾರಿ ಟಿ.ಎನ್.ಕೃಷ್ಣಮೂರ್ತಿ ಹೇಳಿದರು.

ತಾಲೂಕಿನ ಡಣಾಪುರದಲ್ಲಿ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್, ಕಲಿಕಲಿಸು ಯೋಜನೆ ಹಾಗೂ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ, ಡಯಟ್ ನೇತೃತ್ವದಲ್ಲಿ ನಡೆದ ಜಿಲ್ಲೆಯ ಪ್ರೌಢ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮೂರು ಹಂತಗಳ ಕಲಾ ಅಂತರ್ಗತ ತರಬೇತಿಯ ಸಮಾರೋಪದಲ್ಲಿ ಶುಕ್ರವಾರ ಮಾತನಾಡಿದರು. "ಕಲಿಕಲಿಸು ಯೋಜನೆಯು ಕಳೆದ ಹನ್ನೆರಡು ವರ್ಷಗಳಲ್ಲಿ 5,000ಕ್ಕೂ ಹೆಚ್ಚು ಶಿಕ್ಷಕರಿಗೆ ತರಬೇತಿ ನೀಡಿದ್ದು, 65 ಶಿಕ್ಷಕರು ತಮ್ಮ ಯೋಜನೆಗಳಿಗೆ ಅನುದಾನವನ್ನೂ ಪಡೆದಿದ್ದಾರೆ" ಎಂದರು.

ಜಿಲ್ಲಾ ಸಮನ್ವಯಾಧಿಕಾರಿ ಶ್ರೀನಿವಾಸ್ ಮಾತನಾಡಿ,



"ಶಿಕ್ಷಕರು ಕ್ರಿಯಾಶೀಲರಾಗಿದ್ದರೆ ಮಾತ್ರ ವರ್ಗದ ಕೊಠಡಿ ಲವಲವಿಕೆಯಿಂದ ಕೂಡಿರುತ್ತದೆ. ಇಂತಹ ಕೌಶಲ್ಯಗಳನ್ನು ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳ ಸಹಾಯದಿಂದ ಪಡೆದುಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು.

ರಾಜ್ಯ ಸಂಪನ್ಮೂಲ ವ್ಯಕ್ತಿ ಕಿಶನರಾವ್ ಕುಲಕರ್ಣಿ ಮಾತನಾಡಿ, "ಕಲಿಕಲಿಸು" ಎಂಬುದು ಕೇವಲ ಪಠ್ಯ ಬೋಧನೆಯಲ್ಲಿ ಕಲಾ ಮಾಧ್ಯಮವನ್ನು ಅಳವಡಿಸಿಕೊಳ್ಳುವುದಲ್ಲದೆ, ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ನಿರಂತರ ಕ್ರಿಯೆಯನ್ನಾಗಿಸುವ ಪ್ರಯತ್ನವಾಗಿದೆ. "ಕಥೆ, ಹಾಡು, ನಾಟಕ, ಚಿತ್ರಕಲೆ ಅಥವಾ ಯಾವುದೇ ಸ್ಥಳೀಯ ಕಲೆಗಳನ್ನು ಪಠ್ಯಕ್ರಮಗಳೊಂದಿಗೆ ಸಂಯೋಜಿಸಿ, ವಿದ್ಯಾರ್ಥಿ ಕೇಂದ್ರೀಕೃತ ಕಲಿಕಾ ವ್ಯವಸ್ಥೆ ನಿರ್ಮಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ" ಎಂದು ವಿವರಿಸಿದರು.

ರಾಜ್ಯ ಸಂಪನ್ಮೂಲ ವ್ಯಕ್ತಿ ಕೊಟ್ರೇಶ್ ಬಿ. ಮಾತನಾಡಿ, ಐಎಫ್ಎ ಸಂಸ್ಥೆಯು ಕಲಿಕಲಿಸು ಕಾರ್ಯಕ್ರಮದಡಿಯಲ್ಲಿ ಕಲಾ ಅಂತರ್ಗತ ತರಬೇತಿಗಳು, ವಿಚಾರ ಸಂಕಿರಣಗಳನ್ನು ನಡೆಸುವುದು ಮತ್ತು ಅನುದಾನ ನೀಡುವುದರ ಮೂಲಕ ಕರ್ನಾಟಕದ ಸರ್ಕಾರಿ ಶಾಲಾ ಶಿಕ್ಷಕರನ್ನು ಪ್ರೋತ್ಸಾಹಿಸುತ್ತಿದೆ ಎಂದು ಹೇಳಿದರು.

ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಮುರಳೀಧರ ಎಚ್.ವಿ (ಒರಿಗಾಮಿ ಮತ್ತು ಗಣಿತ), ಇನ್ಸಾಫ್ (ಪರಿಸರ ಮತ್ತು ಸಂಗೀತದ ಪರಿಕಲ್ಪನೆಗಳು), ರಿಯಾಜ್ ಸಹಿಮೊಗ್ಗಿ ಮತ್ತು ಸಹನಾ ಪಿಂಜಾರ (ಅನ್ವಯಿಕ ರಂಗಕಲೆ), ಶಂಕರಣ್ಣ ಸಂಕಣ್ಣವರ (ಜಾನಪದದಲ್ಲಿ ಸಮಾಜಶಾಸ್ತ್ರ), ಕಿಶನರಾವ್ ಕುಲಕರ್ಣಿ ಹಾಗೂ ಸಶಿವುನಾಯಕ ದೊರೆ (ಪತ್ರಿಕಾ ಬರಹಗಳು ಮತ್ತು ಭಾಷಾ ಕಲೆಯ ಸಾಧ್ಯತೆಗಳು) ವಿಷಯಗಳ ಮೇಲೆ ತರಬೇತಿ ನೀಡಿದರು. ಜಿಲ್ಲೆಯ 45 ಶಿಕ್ಷಕರು ಈ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

# ಕರ್ನಾಟಕ ಸಾಹಿತ್ಯ ಅಕಾಡೆಮಿ: ಅಧ್ಯಯನ ಶಿಬಿರಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಘಟಕ ಯೋಜನೆಯಡಿ ದಲಿತ ಸಾಹಿತ್ಯ: ಅರ್ಧ ಶತಮಾನ ಎಂಬ ಹೆಸರಿನಲ್ಲಿ 3 ದಿನಗಳ ಅಧ್ಯಯನ ಶಿಬಿರವನ್ನು ಸೆಪ್ಟೆಂಬರ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದ 20 ರಿಂದ 50 ವರ್ಷದೊಳಗಿನ ರಾಜ್ಯದ ಯಾವುದೇ ಭಾಗದ ಆಸಕ್ತ ಅಭ್ಯರ್ಥಿಗಳು ಜುಲೈ 20 ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್: https://sahithyaacademy.karnataka.gov.in ಗೆ ಭೇಟಿ ನೀಡಬಹುದು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

HAMPI TIMES
Print & Digital Kannada Daily

## ಈ ಬಾರಿ ಫಲಿತಾಂಶ ನಮ್ಮದೆ

# ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

### ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಸಹಕಾರ ಇರಲಿ

**ಪ್ರಿಯ ಗ್ರಾಮಸ್ಥರೇ, ವಾರ್ಡ್ ನಿವಾಸಿಗಳೇ, ಶಿಕ್ಷಣ ಪ್ರೇಮಿಗಳೇ, ಜನಪ್ರತಿನಿಧಿಗಳೇ....**

ನಾವೆಲ್ಲರೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕನಸು ಕಾಣುತ್ತೇವೆ, ಅವರ ಸಾಧನೆಯಲ್ಲಿ ಹೆಮ್ಮೆ ಪಡುತ್ತೇವೆ. ಆ ಕನಸುಗಳನ್ನು ನನಸಾಗಿಸಲು, ಆ ಹೆಮ್ಮೆಯನ್ನು ಹೆಚ್ಚಿಸಲು ಇದೀಗ ನಮಗೆ ಒಂದು ಸುವರ್ಣಾವಕಾಶ ಸಿಕ್ಕಿದೆ.

**'ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ'** - ಇದು ಕೇವಲ ಘೋಷಣೆಯಲ್ಲ, ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ಒಂದು ಮಹತ್ತರ ಹೆಜ್ಜೆ. ನಮ್ಮೂರ, ನಮ್ಮ ವಾರ್ಡಿನ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ನಮ್ಮ ಆಸ್ತಿ. ಅವರು ಉತ್ತಮ ಅಂಕ ಗಳಿಸಿ, ಉನ್ನತ ಶಿಕ್ಷಣ ಪಡೆದು, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳೆಯಲು ನಮ್ಮೆಲ್ಲರ ಸಹಕಾರ ಅತ್ಯಗತ್ಯ.

## ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುನ್ನುಡಿ ಬರೆಯುವುದು ಹೇಗೆ?

**ಬಹಳ ಸರಳ! ನಿಮ್ಮ ಗ್ರಾಮದ, ನಿಮ್ಮ ವಾರ್ಡಿನ ಎಸ್ಎಸ್ಎಲ್‌ಸಿ ಮಕ್ಕಳನ್ನು ಗುರುತಿಸಿ. ಅವರೆಲ್ಲರಿಗೂ ಪ್ರತಿದಿನ ಸಂಜೆ ಒಂದೆಡೆ ಸೇರಿ ಸಾಮೂಹಿಕವಾಗಿ ಓದಲು ಒಂದು ಸ್ಥಳಾವಕಾಶ ಕಲ್ಪಿಸಿ. ಇದಕ್ಕಾಗಿ ಒಂದು ಸಮುದಾಯ ಭವನವಿರಬಹುದು, ಶಾಲೆಯ ಆವರಣವಿರಬಹುದು, ಗ್ರಂಥಾಲಯವಾಗಬಹುದು ಅಥವಾ ಯಾವುದೇ ಸುಲಭವಾಗಿ ತಲುಪಬಹುದಾದ ಸ್ಥಳವಿರಬಹುದು.**



ಗ್ರಾಮಗಳ ಸಮುದಾಯ ಭವನ/ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳ ಸಾಮೂಹಿಕ ಓದು





## ಒಟ್ಟಾಗಿ ಓದಿದಾಗ ಏನಾಗುತ್ತದೆ?

ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.
ಸಂದೇಹಗಳನ್ನು ಹಂಚಿಕೊಳ್ಳುತ್ತಾರೆ.
ಪರಸ್ಪರ ಸ್ಫೂರ್ತಿ ತುಂಬುತ್ತಾರೆ.
ಕಲಿಕೆಯ ವಾತಾವರಣ ಸೃಷ್ಟಿಯಾಗುತ್ತದೆ.
ಸಮೂಹ ಕಲಿಕೆಯ ಶಕ್ತಿ ಅನಾವರಣಗೊಳ್ಳುತ್ತದೆ.

**ಈ ಕಾರ್ಯದಲ್ಲಿ ಗ್ರಾಮದ ಸದಸ್ಯರು, ವಾರ್ಡ್ ಸದಸ್ಯರು, ಶಿಕ್ಷಣದ ಮಹತ್ವವನ್ನು ಬಲ್ಲ ಪ್ರತಿಯೊಬ್ಬರೂ ಕೈಜೋಡಿಸಬೇಕು. ನಮ್ಮೆಲ್ಲರ ಸಣ್ಣ ಪ್ರಯತ್ನ, ಈ ಮಕ್ಕಳ ದೊಡ್ಡ ಕನಸುಗಳಿಗೆ ನೀರೆರೆಯುತ್ತದೆ. ಅವರು ತಮ್ಮ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಇದು ಭದ್ರ ಬುನಾದಿಯಾಗುತ್ತದೆ.**

## ಹಂಪಿ ಟೈಮ್ಸ್ ನಿಮ್ಮೊಂದಿಗಿದೆ!

**ಈ ಮಹತ್ಕಾರ್ಯದಲ್ಲಿ ನಿಮಗೆ ಸಂಪೂರ್ಣ ಬೆಂಬಲ ನೀಡಲು ಹಂಪಿಟೈಮ್ಸ್ ಸಿದ್ಧವಿದೆ. ಮಕ್ಕಳ ಭವಿಷ್ಯಕ್ಕೆ ಬೆಳಕಾಗಲು ನಾವು ನಿಮ್ಮೊಂದಿಗೆ ಹೆಜ್ಜೆ ಹಾಕುತ್ತೇವೆ.**
**ಬನ್ನಿ, ಇಂದೇ ಮಕ್ಕಳ ಭವಿಷ್ಯಕ್ಕಾಗಿ ಒಂದಾಗೋಣ. ನಮ್ಮೂರ ವಿದ್ಯಾರ್ಥಿಗಳು ನಮ್ಮ ಹೆಮ್ಮೆಯಾಗುವಂತೆ, ಅವರ ಯಶಸ್ಸಿಗೆ ಸೇತುವೆಯಾಗೋಣ.**
**ಈ ಮೂಲಕ ನಮ್ಮ ಗ್ರಾಮ, ನಮ್ಮ ವಾರ್ಡ್‌ಗೆ ಕೀರ್ತಿ ತರೋಣ.**
**ನಿಮ್ಮ ಒಂದು ಚಿಕ್ಕ ಪ್ರಯತ್ನ, ನೂರಾರು ಮಕ್ಕಳ ಭವಿಷ್ಯಕ್ಕೆ ದೊಡ್ಡ ಬೆಳಕು!**

SCAN to READ HAMPI TIMES E-PAPER

**ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 9448633038, ಹೊಸಪೇಟೆ, ವಿಜಯನಗರ ಜಿಲ್ಲೆ**

# ನಾನು ತುಂಬಾ ದಪ್ಪವಿದ್ದೇನೆ...



ನಾನು ತುಂಬಾ ದಪ್ಪವಿದ್ದೇನೆ, ಇದೇನು ದೇಹ? ಛೇ.. ಹೊರಗಡೆ ಹೋಗಲು ತುಂಬಾ ನಾಚಿಕೆ. ನನ್ನ ಮನೆಯವರೆಲ್ಲ ಎಷ್ಟೊಂದು ತೆಳ್ಳಗಿದ್ದಾರೆ, ನಾನು ಮಾತ್ರ ದಪ್ಪ. ಗೆಳತಿಯರ ಗುಂಪಿನಲ್ಲೂ ಎಲ್ಲರೂ ತೆಳ್ಳಗಿದ್ದಾರೆ, ಯಾರನ್ನು ಭೇಟಿಯಾಗಲು ಹೋಗಲೇ ಬಾರದು ಎಂದು ಮನಸ್ಸಿನಲ್ಲಿ ಅದೇಷ್ಟೋ ಹೆಣ್ಮಕ್ಕಳು ಅಂದುಕೊಂಡು ಕೊರಗುತ್ತಾರೆ. ದಪ್ಪವಿದ್ದಾರೆಂದು ಕೆಲಸವಿಲ್ಲದೆ ಸುಮ್ಮನೆ ಕುಳಿತಿರುವುದಿಲ್ಲ ಅವರು. ಮನೆಯ ಕೆಲಸಗಳ ಮಾಡಿದರು ಅವರ ದೇಹ ಸ್ಥಿತಿ ಹಾಗೇ. ಆನುವಂಶೀಯವಾಗಿ ಬಂದಿರಬಹುದು 'ಅಥವಾ' ಮಕ್ಕಳು ಆದ ನಂತರ ಅವಳ ದೇಹ ಬದಲಾಗಿರಬಹುದು.

* ಮಗು ತಾಯಿಯ ಗರ್ಭದಲ್ಲಿ ಇದೆ ಎಂದು ತಿಳಿದಾಗಿನಿಂದ ಆಕೆಯು ಅದೇಷ್ಟೋ ಮಾತ್ರೆಗಳ, ಇಂಜೇಕ್ಷನ್ ಗಳ ತನ್ನ ದೇಹಕ್ಕೆ ತೆಗೆದುಕೊಳ್ಳುತ್ತಾಳೆ. ಪ್ರಸವದ ನಂತರ ಸಹ ಆಕೆ ಔಷಧ ತೆಗೆದುಕೊಳ್ಳುವಳು.

* ಹಾರ್ಮೋನ್ಸ ಏರು ಪೇರು – ಈ ಹಂತದಲ್ಲಿ ಮಹಿಳೆಯ ದೇಹ ಬದಲಾವಣೆ ಆಗುವ ಸಾಧ್ಯತೆ ಬಹಳ ಇರುವುದು. ಆಕೆ ತನ್ನ ಕರ್ತವ್ಯ ಮರೆಯದೆ ಮಗುವಿನ ಮತ್ತು ಮನೆಯವರ ನೋಡಿಕೊಳ್ಳುವಳು. ಇದೇನು ಮೈ ಬಂದು ಬಿಟ್ಟಿದೆ ಸ್ವಲ್ಪ ತಿನ್ನೊದು ಕಡಿಮೆ ಮಾಡು ಎಂದು ಮನೆಯವರ



ಬಾಯಿಂದ ಮಾತು ಬರುತ್ತೆ. ಅವಳೇನು ವಿಶೇಷವಾಗಿದ್ದು ತಿನ್ನೊಲ್ಲ. ಎಲ್ಲಿಯೂ ಹೊರಗಡೆ ಹೋಗಿ ತಿಂಡಿ ತಿನ್ನೋಲ್ಲ ಮನೆಯವರಿಗೆ ಮಾಡಿದ್ದೆ ತಾನು ತಿನ್ನುವಳು. ಹೆಣ್ಣಿನ ಮನ ನೋಯಿಸುವ ಮಾತು ಬೇಡ.

* ಮಾತುಗಳ ಮೇಲೆ ಹಿಡಿತವಿರಲಿ: ದಪ್ಪಗಿರುವೆ ನೀನು ಎಂದು ಮನೆಯ ಸದಸ್ಯರು ನಗುತ್ತಿರ ಬಹುದು ಆದರೆ ಅವಳೇ ಆ ಮನೆಯ ಅನ್ನಪೂರ್ಣೆ. ಅವಳಿರದಿದ್ದರೆ ರುಚಿಯಾಗಿ ಒಂದು ದಿನವೂ ನೀವು ಅಡುಗೆ ಮಾಡಿ ಬಡಿಸೋಲ್ಲ. ಯೋಚಿಸಿ ಮಾತನಾಡಿ.

* ಹೊರಗಡೆಯವರು ಆಕೆಗೆ ಮಾತನಾಡುವ ಹಕ್ಕು ಹೊಂದಿರುವುದಿಲ್ಲ. ಏಕೆಂದರೆ ಆಕೆ ಅವರ ಮನೆಗೆ ಊಟಕ್ಕೂ ಹೋಗುವುದಿಲ್ಲ ಮತ್ತು ಆಕೆಯ ಬಗ್ಗೆ ಕೆಟ್ಟದ್ದಾಗಿ ಮಾತನಾಡುವವರು ಅವಳಿಗೆ ಮನೆಗೆ ದಿನಸಿ ತಂದು ಹಾಕಿರುವುದಿಲ್ಲ. ಎಲ್ಲರ ಜೊತೆಗೆ ತನ್ನದೊಂದು ಮಾತಿರಲಿ ಎಂದು ಮಾತ ನಾಡಬಾರದು. ನಿಮ್ಮ ಕೊಂಕು ಮಾತು ಕೇಳಿಸಿಕೊಂಡಾಕೆ ಮಾನಸಿಕವಾಗಿ ಕುಗ್ಗುತ್ತಾಳೆ. ದೇಹಸ್ಥಿತಿ ಹೇಗೆ ಇರಲಿ ಅವಳಿಗೂ ಮನಸ್ಸಿದೆ. ಜೊತೆಗಿರುವ ಮಡದಿಯೋ, ತಾಯಿಯೋ, ಸಹೋದರಿಯೋ ಅವರ ಜೊತೆಗೆ ಪ್ರೀತಿಯಿಂದ ಮಾತನಾಡಿ.

**– ಸುವರ್ಣಾ ಭಟ್ಟ.**

# ಎಐ ಕರಾಳ ಮುಖ : ಡೀಪ್‌ಫೇಕ್ ಬ್ಲಾಕ್‌ಮೇಲ್

## ನೀವು ನೋಡುವುದೆಲ್ಲಾ ನಿಜವಲ್ಲ! ಮುಖ ನಕಲಿ, ಅಪಾಯ ಅಸಲಿ!

ಬೆಂಗಳೂರಿನ ಒಬ್ಬ ಯುವ ಸಾಫ್ಟ್‌ವೇರ್ ಇಂಜಿನಿಯರ್ ರಮೇಶ್‌ಗೆ ಒಂದು ದಿನ ವಾಟ್ಸಾಪ್‌ನಲ್ಲಿ ಒಂದು ವಿಡಿಯೋ ಬಂತು. ಅದರಲ್ಲಿ ರಮೇಶ್‌ನಂತೆ ಕಾಣುವ ವ್ಯಕ್ತಿ ಒಂದು ಸಂಗೀತ ಕಚೇರಿಯಲ್ಲಿ ಅನುಚಿತವಾಗಿ ವರ್ತಿಸುತ್ತಿದ್ದಾನೆ. ಸಂದೇಶದ ಜೊತೆಗೆ ಬೆದರಿಕೆ: "ಈ ವಿಡಿಯೋವನ್ನು ಎಲ್ಲರಿಗೂ ಕಳುಹಿಸದಿರಲು ಎರಡು ಲಕ್ಷ ರೂಪಾಯಿ ಕೊಡಿ!" ಆದರೆ ರಮೇಶ್ ಆ ಕಚೇರಿಗೆ ಎಂದಿಗೂ ಹೋಗಿರಲಿಲ್ಲ! ವಿಡಿಯೋ ಎಷ್ಟು ನಿಜವೆಂಬಂತಿತ್ತೆಂದರೆ, ಅವನ ಆಪ್ತ ಸ್ನೇಹಿತರಿಗೂ ಇದು ರಮೇಶ್ ಎಂದೇ ತೋರಿತು. ಇದು ಡೀಪ್‌ಫೇಕ್ ಬ್ಲಾಕ್‌ಮೇಲ್. ಎಐ ತಂತ್ರಜ್ಞಾನದ ಕರಾಳ ಮುಖ. ಈ ಡಿಜಿಟಲ್ ದುಷ್ಕೃತ್ಯವು ಜನರ ಜೀವನವನ್ನು ಆತಂಕಕ್ಕೀಡುಮಾಡುತ್ತಿದೆ. ಏನಿದು ಡೀಪ್‌ಫೇಕ್? ಇದು ಹೇಗೆ ಕೆಲಸ ಮಾಡುತ್ತದೆ, ಮತ್ತು ಇದರಿಂದ ರಕ್ಷಣೆ ಹೇಗೆ?

**ಡೀಪ್‌ಫೇಕ್ ಎಂದರೇನು?**

ಡೀಪ್‌ಫೇಕ್ ಎಂಬುದು ಕೃತಕ ಬುದ್ಧಿಮತ್ತೆಯ (ಎಐ) ಒಂದು ಶಾಖೆಯಾದ ಡೀಪ್ ಲರ್ನಿಂಗ್‌ನಿಂದ ರಚಿತವಾದ ತಂತ್ರಜ್ಞಾನ. ಇದು ವಿಡಿಯೋ, ಆಡಿಯೋ, ಅಥವಾ ಚಿತ್ರಗಳನ್ನು ತಿರುಚಿ, ನಕಲಿ ಆದರೂ, ನಿಜವೆಂಬಂತೆ ಕಾಣುವಂತೆ ಮಾಡುತ್ತದೆ. ಉದಾಹರಣೆಗೆ, ನಿಮ್ಮ ಫೇಸ್‌ಬುಕ್ ಫೋಟೊವನ್ನು ತೆಗೆದುಕೊಂಡು, ಎಐ ಸಹಾಯದಿಂದ ಒಂದು ವಿಡಿಯೋ ತಯಾರಿಸಬಹುದು, ಅದರಲ್ಲಿ ನೀವು ಎಂದಿಗೂ ಮಾಡದ ಕೆಲಸವನ್ನು ಮಾಡುತ್ತಿರುವಂತೆ ಕಾಣಿಸಿಕೊಳ್ಳಬಹುದು! ಈ ತಂತ್ರಜ್ಞಾನವು ಮನರಂಜನೆಗಾಗಿ ಆರಂಭವಾದರೂ, ಇಂದು ಇದನ್ನು ಬ್ಲಾಕ್‌ಮೇಲ್, ವಂಚನೆ, ಮತ್ತು ದುರಪಯೋಗಕ್ಕಾಗಿ ಬಳಸಲಾಗುತ್ತಿದೆ.

**ಡೀಪ್‌ಫೇಕ್ ಹೇಗೆ ಕೆಲಸ ಮಾಡುತ್ತದೆ?**

ಡೀಪ್‌ಫೇಕ್ ತಂತ್ರಜ್ಞಾನದಲ್ಲಿ ಎರಡು ಎಐ ಮಾಡೆಲ್‌ಗಳು ಕೆಲಸ ಮಾಡುತ್ತವೆ: ಒಂದು 'ಜನರೇಟರ್' ನಕಲಿ ವಿಡಿಯೋವನ್ನು ನಿರ್ಮಿಸುತ್ತದೆ, ಇನ್ನೊಂದು 'ಇವ್ಯಾಲ್ಯುಯೇಟರ್' ಅದು ನಿಜವೆಂಬಂತೆ ಕಾಣುತ್ತದೆಯೇ ಎಂದು ನಿರ್ಧರಿಸುತ್ತದೆ. ಕೇವಲ ಕೆಲವು ಫೋಟೊಗಳು ಅಥವಾ ವಿಡಿಯೋ ಕ್ಲಿಪ್‌ಗಳಿಂದ, ಎಐ ಸಹಾಯದಿಂದ ನಿಮ್ಮ ಮುಖವನ್ನು ಯಾವುದೇ ಸನ್ನಿವೇಶಕ್ಕೆ ಜೋಡಿಸಬಹುದು. ಒಂದು ಸಿನಿಮಾ ದೃಶ್ಯದಿಂದ ಹಿಡಿದು ಅನೈತಿಕ ಕೃತ್ಯದವರೆಗೆ! ಇದಕ್ಕೆ ಸಾಮಾಜಿಕ ಮಾಧ್ಯಮದಲ್ಲಿ ನೀವು ಹಂಚಿಕೊಂಡ ಒಂದೇ ಒಂದು ಸೆಲ್ಫಿಯೂ ಸಾಕು!



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

**ಒಂದು ನಿಜ ಕತೆ**

ಬೆಂಗಳೂರಿನ ಯುವತಿ ಲಕ್ಷ್ಮಿ ಅವರ ಸಾಮಾಜಿಕ ಜಾಲತಾಣದ ಚಿತ್ರಗಳನ್ನು ದುಷ್ಕರ್ಮಿಗಳು ದುರುಪಯೋಗಪಡಿಸಿ ಕೊಂಡು, ಡೀಪ್‌ಫೇಕ್ ತಂತ್ರಜ್ಞಾನದ ಮೂಲಕ ಅಶ್ಲೀಲ ವಿಡಿಯೋ ರಚಿಸಿ, 5 ಲಕ್ಷ ರೂಪಾಯಿಗಳಿಗೆ ಬೆದರಿಕೆ ಹಾಕಿದರು. ಆದರೆ, ಲಕ್ಷ್ಮಿ ಭಯಪಡದೆ ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸರಿಗೆ ದೂರು ಸಲ್ಲಿಸಿದರು. ಪೊಲೀಸರು ತ್ವರಿತ ತನಿಖೆ ನಡೆಸಿ, ಐಪಿ ವಿಳಾಸಗಳ ಮೂಲಕ ಆರೋಪಿಗಳನ್ನು ಬಂಧಿಸಿದರು. ಆರೋಪಿಗಳ



ಕಂಪ್ಯೂಟರ್ ಗಳಿಂದ ಡೀಪ್‌ಫೇಕ್ ಸಾಫ್ಟ್‌ವೇರ್ ಮತ್ತು ಇತರ ಸಂತ್ರಸ್ತರ ಡೇಟಾವನ್ನು ವಶಪಡಿಸಿಕೊಂಡರು.

**ಯಾರಿಗೆ ಅಪಾಯ?**

**ಡೀಪ್‌ಫೇಕ್ ಯಾರನ್ನೂ ಬಿಡುವುದಿಲ್ಲ!**

**ಖಾಸಗಿ ವ್ಯಕ್ತಿಗಳು:** ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯವಾಗಿರುವ ಯುವಕರು, ಮಹಿಳೆಯರು, ಮತ್ತು ಸಾರ್ವಜನಿಕ ವ್ಯಕ್ತಿಗಳು ಇದಕ್ಕೆ ಸುಲಭ ಗುರಿಯಾಗುತ್ತಾರೆ.

**ಕಾರ್ಪೊರೇಟ್ ಲೀಡರ್‌ಗಳು:** ಉದ್ಯಮಿಗಳು ಮತ್ತು ಸಿಇಓಗಳ ನಕಲಿ ವಿಡಿಯೋಗಳು ಕಂಪನಿಗಳಿಗೆ ಆರ್ಥಿಕ ಹಾನಿಯನ್ನುಂಟುಮಾಡಬಹುದು.

**ರಾಜಕಾರಣಿಗಳು:** ನಕಲಿ ವಿಡಿಯೋಗಳು ಚುನಾವಣೆಯ ಫಲಿತಾಂಶವನ್ನೇ ಉಲ್ಟಾ ಮಾಡಬಹುದು.

ರಾಜಕೀಯ ಕ್ಷೇತ್ರದಲ್ಲಿ, ಡೀಪ್‌ಫೇಕ್‌ಗಳನ್ನು ರಾಜಕಾರಣಿಗಳ ನಕಲಿ ಭಾಷಣಗಳು ಅಥವಾ ಹೇಳಿಕೆಗಳನ್ನು ರೂಪಿಸಿ ಸಾರ್ವಜನಿಕ ಅಭಿಪ್ರಾಯವನ್ನು ಪ್ರಭಾವಿಸಲು ಬಳಸಲಾಗುತ್ತದೆ. 2019ರಲ್ಲಿ, ಫೇಸ್‌ಬುಕ್ ಸಿಇಓ ಮಾರ್ಕ್ ಜುಕರ್‌ಬರ್ಗ್‌ರ ಡೀಪ್‌ಫೇಕ್ ವಿಡಿಯೋವೊಂದು ಆನ್‌ಲೈನ್‌ನಲ್ಲಿ ವೈರಲ್ ಆಗಿತ್ತು, ಅದರಲ್ಲಿ ಅವರು ಶತಕೋಟಿಗಟ್ಟಲೆ ಜನರ ಡೇಟಾದ ಮೇಲೆ 'ಪೂರ್ಣ ನಿಯಂತ್ರಣ' ಹೊಂದಿರುವುದಾಗಿ ಹೇಳಿಕೊಂಡಂತೆ ತೋರಿಸಲಾಗಿತ್ತು. ಇದೇ ರೀತಿ, ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿ, ವ್ಯಾಪಕ ಚರ್ಚೆಗೆ ಕಾರಣವಾಯಿತು, ಇತ್ತೀಚೆಗೆ, ಬೆಂಗಳೂರಿನ ಇಬ್ಬರು ನಿವಾಸಿಗಳು ಶೇರ್ ವ್ಯಾಪಾರದ ಹೆಸರಿನಲ್ಲಿ ಡೀಪ್‌ಫೇಕ್ ವಿಡಿಯೋಗಳನ್ನು ಬಳಸಿದ ಆನ್‌ಲೈನ್ ವಂಚನೆಗೆ ಒಳಗಾಗಿ ರೂ.87 ಲಕ್ಷ ಕಳೆದುಕೊಂಡಿದ್ದಾರೆ. ವಂಚಕರು ಇನ್ಫೋಸಿಸ್ ಸಹ–ಸ್ಥಾಪಕ ಎನ್. ಆರ್. ನಾರಾಯಣಮೂರ್ತಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಡೀಪ್‌ಫೇಕ್ ವಿಡಿಯೋಗಳನ್ನು ಬಳಸಿ ಹೂಡಿಕೆಗೆ ಪ್ರೇರೇಪಿಸಿದ್ದರು. ಅಂತೆಯೇ, ಹೈದರಾಬಾದ್‌ನ 71 ವರ್ಷದ ಹಿರಿಯ ವೈದ್ಯರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಕಲಿ ವಿಡಿಯೋ ನೋಡಿ ಮೋಸಕ್ಕೊಳಗಾಗಿ ರೂ.20 ಲಕ್ಷಕ್ಕೂ ಹೆಚ್ಚು ಹಣ ಕಳೆದುಕೊಂಡಿದ್ದರು.

**ಡೀಪ್‌ಫೇಕ್ ಕೇವಲ ಆರ್ಥಿಕ ನಷ್ಟವನ್ನಷ್ಟೇ ಉಂಟುಮಾಡುವುದಿಲ್ಲ;** ಇದು ಮಾನಸಿಕ ಮತ್ತು ಸಾಮಾಜಿಕ ಜೀವನವನ್ನು ತಲೆಕೆಳಗಾಗಿಸುತ್ತದೆ. ಒಂದು ಅನುಚಿತ ನಕಲಿ ವಿಡಿಯೋ ವೈರಲ್ ಆದರೆ, ವ್ಯಕ್ತಿಯ ಮತ್ತು ಕುಟುಂಬದ ಗೌರವ, ವೃತ್ತಿಜೀವನ, ಮತ್ತು ಸಾಮಾಜಿಕ ಸಂಬಂಧಗಳು ಧಕ್ಕೆಗೊಳಗಾಗುತ್ತವೆ. ಆದರೆ, ಇಂತಹ ಪ್ರಕರಣಗಳು ಹೆಚ್ಚು ವರದಿಯಗುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ, ಇಂತಹ ಘಟನೆಗಳು ಸಾಮಾಜಿಕ ಕಳಂಕ ಉಂಟು ಮಾಡಬಹುದು. ಬೆದರಿಕೆಗೊಳಗಾದವರು ಆತಂಕ, ಖಿನ್ನತೆ, ಮತ್ತು ಸಾಮಾಜಿಕವಾಗಿ ಬಹಿಷ್ಕಾರಕ್ಕೆ ತುತ್ತಾಗಬಹುದು.

**ರಕ್ಷಣೆಗೆ ದಾರಿಗಳು: ಜಾಗೃತಿಯೇ ಶಕ್ತಿ.**

**ಡೀಪ್‌ಫೇಕ್‌ನಿಂದ ರಕ್ಷಣೆ ಪಡೆಯಲು, ಜಾಗೃತಿಯೇ ಮೊದಲ ಹೆಜ್ಜೆ:**

**ಸಾಮಾಜಿಕ ಮಾಧ್ಯಮದಲ್ಲಿ ಎಚ್ಚರ:** ನಿಮ್ಮ ಫೋಟೊಗಳು ಮತ್ತು ವಿಡಿಯೋಗಳನ್ನು ಖಾಸಗಿಯಾಗಿಡಿ. ಸಾರ್ವಜನಿಕವಾಗಿ ಹಂಚಿಕೊಂಡ ಚಿತ್ರಗಳು ಡೀಪ್‌ಫೇಕ್‌ಗೆ ಸುಲಭ ಗುರಿಯಾಗುತ್ತವೆ.

**ಶಂಕಾಸ್ಪದ ಸಂದೇಶಗಳಿಗೆ ಗಮನ:** ಇಮೇಲ್, ವಾಟ್ಸಾಪ್, ಅಥವಾ ಎಸ್‌ಎಂಎಸ್ ಮೂಲಕ ಬೆದರಿಕೆ ಬಂದರೆ, ತಕ್ಷಣ ಸೈಬರ್ ಕ್ರೈಂ ಪೊಲೀಸರನ್ನು ಸಂಪರ್ಕಿಸಿ.

**ತಾಂತ್ರಿಕ ಸಾಧನಗಳು:** 'ಡೀಪ್‌ವೇರ್ ಸ್ಕ್ಯಾನರ್' ಅಥವಾ 'ಫೋರೆನ್ಸಿಕಲ್ಲಿ' ನಂತಹ ತಂತ್ರಾಂಶಗಳು ವಿಡಿಯೋದ ಸಾಚಾತನವನ್ನು ಪರೀಕ್ಷಿಸಬಹುದು., ಉದಾಹರಣೆಗೆ, ಕಣ್ಣಿನ ಚಲನೆಯ ಅಸಮಂಜಸತೆಯನ್ನು ಗುರುತಿಸುವ ಸಾಧನಗಳು.

**ಕಾನೂನು ಸಹಾಯ:** ಭಾರತದ ಐಟಿ ಕಾಯ್ದೆ 2000ರ ಸೆಕ್ಷನ್ 66ಇ ಮತ್ತು 67 ರಡಿಯಲ್ಲಿ ಡೀಪ್‌ಫೇಕ್‌ಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಬಹುದು. ಆದರೆ, ಡೀಪ್‌ಫೇಕ್‌ಗೆ ನಿರ್ದಿಷ್ಟ ಕಾನೂನುಗಳ ಅಗತ್ಯವಿದೆ, ಯುರೋಪಿಯನ್ ಒಕ್ಕೂಟದಂತಹ ದೇಶಗಳು ಈಗಾಗಲೇ ಇಂತಹ ಕಾನೂನುಗಳನ್ನು ಜಾರಿಗೆ ತಂದಿವೆ.

**ಸಮಾಜದ ಪಾತ್ರ: ಎಐನ ಒಳಿತು–ಕೆಡಕು**

ಡೀಪ್‌ಫೇಕ್‌ನ ಅಪಾಯವನ್ನು ತಗ್ಗಿಸಲು, ಸಮಾಜವೇ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಶಾಲೆಗಳು ಮತ್ತು ಕಾಲೇಜುಗಳಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಕಡ್ಡಾಯವಾಗಿ ಕಲಿಸಬೇಕು. ಹೊಸಪೇಟೆಯಂತಹ ಪಟ್ಟಣಗಳಲ್ಲಿ, ಸಾಮಾಜಿಕ ಮಾಧ್ಯಮದ ಸುರಕ್ಷಿತ ಬಳಕೆಯ ಕುರಿತು ಕಾರ್ಯಾಗಾರಗಳು ಜನರಿಗೆ ಜಾಗೃತಿ ನೀಡಬಹುದು. ಸ್ಥಳೀಯ ಸಮುದಾಯ ಕೇಂದ್ರಗಳಲ್ಲಿ ಡೀಪ್‌ಫೇಕ್‌ನ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳು ಅಗತ್ಯ.

**ಭವಿಷ್ಯದ ದಾರಿ:** ಡೀಪ್‌ಫೇಕ್ ತಂತ್ರಜ್ಞಾನದಿಂದ ಲಾಭವೂ ಇದೆ. .ಇದನ್ನು ಸಿನಿಮಾ, ಶಿಕ್ಷಣ, ಮತ್ತು ಕಲೆಗೆ ಒಳ್ಳೆಯ ರೀತಿಯಲ್ಲಿ ಬಳಸಬಹುದು, ಆದರೆ ದುರುಪಯೋಗವು ಸಮಾಜಕ್ಕೆ ಭಾರೀ ಹಾನಿಯನ್ನುಂಟುಮಾಡಬಹುದು. ಭಾರತದಂತಹ ದೇಶದಲ್ಲಿ, ಡಿಜಿಟಲ್ ಸಾಕ್ಷರತೆಯ ಕೊರತೆಯಿಂದ ಈ ಅಪಾಯ ಇನ್ನಷ್ಟು ದೊಡ್ಡದಾಗಿದೆ. ಸರ್ಕಾರವು ಡೀಪ್‌ಫೇಕ್‌ಗೆ ವಿರುದ್ಧ ನಿರ್ದಿಷ್ಟ ಕಾನೂನುಗಳನ್ನು ರೂಪಿಸಿ, ಕಠಿಣ ಶಿಕ್ಷೆ ಮತ್ತು ವೇಗವಾದ ತನಿಖಾ ವಿಧಾನಗಳನ್ನು ಜಾರಿಗೆ ತರಬೇಕು. ತಂತ್ರಜ್ಞಾನ ಕಂಪನಿಗಳು, ಸರ್ಕಾರ, ಮತ್ತು ಸಮಾಜ ಒಟ್ಟಾಗಿ ಈ ಡಿಜಿಟಲ್ ಸವಾಲನ್ನು ಎದುರಿಸಿದರೆ ಮಾತ್ರ ಭವಿಷ್ಯ ಸುರಕ್ಷಿತವಾಗಿರಲಿದೆ.

**ಜಾಗೃತರಾಗಿ, ಸುರಕ್ಷಿತರಾಗಿರಿ!**

ಡೀಪ್‌ಫೇಕ್ ಬ್ಲಾಕ್‌ಮೇಲ್ ಕೃತಕ ಬುದ್ಧಿಮತ್ತೆಯ ಭಯಾನಕ ಮುಖವಾಗಿದೆ. ಆದರೆ, ಜಾಗೃತಿಯ ದೀವಿಗೆ, ತಾಂತ್ರಿಕ ಜ್ಞಾನದ ಬಲದಿಂದ, ಮತ್ತು ಕಾನೂನಿನ ಬೆಂಬಲದಿಂದ ಇದನ್ನು ಎದುರಿಸಬಹುದು. ನಿಮ್ಮ ಡಿಜಿಟಲ್ ಜೀವನವನ್ನು ಖಾಸಗಿಯಾಗಿಡಿ, ಶಂಕಾಸ್ಪದ ಸಂದೇಶಗಳಿಗೆ ಬಲಿಯಾಗದಿರಿ, ಮತ್ತು ಈ ತಂತ್ರಜ್ಞಾನದ ಯುಗದಲ್ಲಿ ಎಚ್ಚರಿಕೆಯಿಂದ ಮುನ್ನಡೆಯಿರಿ. ಡೀಪ್‌ಫೇಕ್‌ನ ಕತ್ತಲೆಯಿಂದ ರಕ್ಷಣೆ ಪಡೆಯಲು, ಈಗಲೇ ಜಾಗೃತರಾಗಿ. ನಿಮ್ಮ ಭವಿಷ್ಯವು ನಿಮ್ಮ ಕೈಯಲ್ಲಿದೆ!

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮಹಿಳೆಯರಿಗೆ ಆತ್ಮಸ್ಥೈರ್ಯ ತಂದ ಸಾರಾಅಬೂಬಕ್ಕರ್

ನೊಂದ ಮಹಿಳೆಯರ ಸಾಂತ್ವನದ ಧ್ವನಿಯಾಗಿ, ಶೋಷಣೆ ಗೊಳಗಾದ ಅದೆಷ್ಟೋ ಮಹಿಳೆಯರ ಕತ್ತಲ ಬಾಳಿಗೆ ಬೆಳಕಾದ ಕನ್ನಡದ ಹೆಸರಾಂತ ಮಹಿಳಾ ಸಂವೇದನೆಯ ಹಿರಿಯ ಲೇಖಕಿ ಸಾರಾಅಬೂಬಕರ್ ಅವರ ಎಂಬತ್ತೊಂಬತ್ತನೆಯ ಜನ್ಮದಿನದ ನಾಳೆ. ಸಾರಾಅಬೂಬಕ್ಕರ್ 1936 ಜೂನ್ 30ರಂದು ಕಾಸರಗೋಡಿನ ಚಂದ್ರಗಿರಿ ತೀರದ ಪುದಿಯಾಪುರ್ (ಹೊಸಮನೆ) ಗ್ರಾಮದಲ್ಲಿ ಜನಿಸಿದರು. ತಂದೆ ನ್ಯಾಯವಾದಿಗಳಾಗಿದ್ದ ಪಿ.ಅಹಮದ್ ಮತ್ತು ತಾಯಿಜೈನಾಬೀ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲೂ, ಪ್ರೌಢಶಿಕ್ಷಣವನ್ನು ಕಾಸರಗೋಡಿನಲ್ಲೂ ಪೂರೈಸಿದರು. ಎಂಜಿನಿಯರಾಗಿದ್ದ ಅಬೂಬಕರ್ ಅವರೊಡನೆ ಸಾರಾ ವಿವಾಹವಾಗಿ ವಿದ್ಯಾಭ್ಯಾಸ ಅಲ್ಲಿಗೇ ಸ್ಥಗಿತಗೊಂಡಿತು. ಆದರೆ ಓದಿನಲ್ಲಿ ಅಪಾರ ಆಸಕ್ತಿಯನ್ನು ರೂಢಿಸಿಕೊಂಡ ಸಾರಾ ಅವರು ಶಿವರಾಮಕಾರಂತ, ಇನಾಂದಾರ್, ಎಸ್.ಎಲ್.ಭೈರಪ್ಪ, ಯು.ಆರ್.ಅನಂತಮೂರ್ತಿ ಮೊದಲಾದವರ ಬರವಣಿಗೆಗಳಿಗೆ ಮಾರುಹೋಗಿ ಸದಾ ಓದಿನಲ್ಲಿ ಮಗ್ನರಾಗಿರುತ್ತಿದ್ದರು. ಇಷ್ಟೇಅಲ್ಲ, ಮನೋವಿಜ್ಞಾನದ ಹಿನ್ನೆಲೆಯಲ್ಲಿ ತ್ರಿವೇಣಿಯವರು ಬರೆದ ಕಾದಂಬರಿಗಳು ಅವರನ್ನು ಗಾಢವಾಗಿ ಆಕರ್ಷಿಸಿದವು.



ಶಾಲಿನಿ ಎಂ
ಶಿಕ್ಷಕಿ, ಚಿತ್ರದುರ್ಗ

Scan For Digital Colourful
HAMPI TIMES E-paper

ಮಾತೃಭಾಷೆ ಮಲೆಯಾಳಂ ಆದರೂ ಸಾಹಿತ್ಯಕೃಷಿ ಮಾಡಿದ್ದು ಕನ್ನಡದಲ್ಲಿ ಎಂಬುದು ವಿಶೇಷ. ಕನ್ನಡ ತಮಗೆಲ್ಲವನ್ನೂ ಕೊಟ್ಟಿದೆ ಎಂಬ ಸಂತೃಪ್ತಿಯ ಭಾವವನ್ನೂ ಹೊಂದಿದ್ದಾರೆ. ಸಾರಾ ಅವರೊಳಗಿರುವ ಸಾಹಿತ್ಯಪ್ರೇಮಿ ಹಾಗೂ ಲೇಖಕಿ ಹೊರಬರಲು, ಅವರು ಬದುಕುತ್ತಿದ್ದ ಪರಿಸರ ಹಾಗೂತನ್ನ ಸಮುದಾಯದವರೇ ಅನುಭವಿಸುತ್ತಿದ್ದ ಹಿಂಸೆ, ಸಂಕಟಗಳ ಪರಿಸ್ಥಿತಿ ಅವರು ತೀವ್ರವಾಗಿ ಚಿಂತನೆಗೊಳಗು ಮಾಡುತ್ತಿತ್ತು. ಮುಸ್ಲಿಂ ಸಂಪ್ರದಾಯದಲ್ಲಿ ಮಕ್ಕಳಾದ ನಂತರ ತಲಾಕ್‌ಗೆ ಒಳಗಾದ ಹೆಣ್ಣಿನ ಅಸಹನೀಯ ಬದುಕು ಸಾರಾ ಅವರನ್ನು ಕಾಡುತ್ತಿದ್ದವು. ಎಂ.ಕೆ. ಇಂದಿರಾ ಅವರಂತೆ ನಲವತ್ತು ದಾಟಿದ ನಂತರ ಸಾರಾ ಅವರು ಮೊದಲ ಬಾರಿಗೆ ಬರೆದ 'ಚಂದ್ರಗಿರಿಯ ತೀರದಲ್ಲಿ' ಧಾರಾವಾಹಿಯಾಗಿ 'ಲಂಕೇಶ್‌ಪತ್ರಿಕೆ'ಯಲ್ಲಿ ಪ್ರಕಟಗೊಂಡಿತು. ಇದರಲ್ಲಿ ನಿತ್ಯ ಬದುಕಿನ ಮತ್ತು ಧರ್ಮದ ಕಟ್ಟುಪಾಡುಗಳಲ್ಲಿ ಶೋಷಿತಗೊಂಡ ಮಹಿಳೆಯರ ಮನದಾಳದ ನೋವಿನ ಚಿತ್ರಣ ಅಸಂಖ್ಯಾತ ಓದುಗರ ಹೃದಯವನ್ನು ತಲ್ಲಣಗೊಳಿಸಿ ಕಾದಂಬರಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.



ಸಾರಾ ಅವರು ಹಲವು ಕಾದಂಬರಿಗಳು, ಕಥೆ, ನಾಟಕ, ಲೇಖನಗಳನ್ನು ರಚಿಸಿದ್ದಾರೆ. ಚಂದ್ರಗಿರಿಯ ತೀರದಲ್ಲಿ (1984) – ಮೊದಲ ಕಾದಂಬರಿ. ಇದು ಹಿಂದಿ, ತಮಿಳು, ತೆಲುಗು, ಮರಾಠಿ, ಒಡಿಯಾ ಭಾಷೆಗಳಿಗೆ ಅನುವಾದ ವಾಗಿದೆ. ವಿಶ್ವವಿದ್ಯಾಲಯಗಳ ಪಠ್ಯವಾಗಿಯೂ ಪ್ರಖ್ಯಾತವಾಗಿದೆ. ಸಹನಾ(1985), ವಜ್ರಗಳು, ಕದನವಿರಾಮ (1988), ಸುಳಿಯಲ್ಲಿ ಸಿಕ್ಕವರು (1994), ಪ್ರವಾಹ–ಸುಳಿ, ತಳ ಒಡೆದದೋಣಿ (1997), ಪಂಜರ, ಇಳಿಜಾರು, ಕಾಣಿಕೆ–ಕಾದಂಬರಿಗಳಾದರೆ, ಚಪ್ಪಲಿಗಳು(1989), ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು(1992), ಖೆಡ್ಡಾ, ಗಗನಸಖಿ(2007) ಮುಂತಾದ ಕಥಾ ಸಂಕಲನಗಳನ್ನು, ಕಮರಿದ ಕನಸು, ಹೀಗೂ ಒಂದು ಬದುಕು, ತಾಳ, ಮಗಳು ಹುಟ್ಟಿದಳು–ಮುಂತಾದ ಬಾನುಲಿ ನಾಟಕಗಳಲ್ಲದೆ, ಲೇಖನಗುಚ್ಛ, ಮನೋಮಿ, ಬಲೆ ಮುಂತಾದ ಲೇಖನ ಮತ್ತು ಅನುವಾದ ಕೃತಿಗಳನ್ನು ರಚಿಸಿದ್ದಾರೆ. 'ಇಷಾರಾಮದ ಆಳದಲ್ಲಿ' ಪ್ರವಾಸ ಕಥನ. ಸಾರಾ ಅವರ 'ಚಂದ್ರಗಿರಿಯತೀರದಲ್ಲಿ' ಕಾದಂಬರಿಗೆ 1984ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 2001ರಲ್ಲಿ ದಾನಚಿಂತಾಮಣಿಅತ್ತಿಮಬ್ಬೆ, ಅನುಪಮಾಪ್ರಶಸ್ತಿ, ಮಾಸ್ತಿಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, 2012ರಲ್ಲಿ ನೃಪತುಂಗ ಪ್ರಶಸ್ತಿ, 2022ರಲ್ಲಿ ಬರಗೂರು ಪ್ರಶಸ್ತಿ ಮುಂತಾದವು ಲಭಿಸಿವೆ. 'ಸುಳಿಯಲ್ಲಿ ಸಿಕ್ಕವರು' ಕಾದಂಬರಿಗೆ ಮಾತೋಶ್ರೀ ರತ್ನಮ್ಮ ಹೆಗಡೆ ಪ್ರಶಸ್ತಿ, 'ಸಹನಾ' ಕಾದಂಬರಿಗೆ ವರ್ಧಮಾನ ಪ್ರಶಸ್ತಿ ಸಂದಿದೆ. 2008ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಗೌರವಡಾಕ್ಟರೇಟ್ ಪುರಸ್ಕರಿಸಿದೆ. ಮುಸ್ಲಿಂ ಮಹಿಳೆಯ ಕತ್ತಲ ಬದುಕನ್ನು ಕನ್ನಡದಲ್ಲಿ ಬಿಚ್ಚಿಟ್ಟ ಮೊದಲ ಲೇಖಕಿಯಾದ ಸಾರಾಅಬೂಬಕ್ಕರ್ ಹತ್ತು ಜನವರಿ 2023ರಂದು ತೀರಿಕೊಂಡರು.


ಸಾರಾತಮ್ಮ ಸಾಹಿತ್ಯರಚನೆಯ ಪ್ರೇರಣಾಶಕ್ತಿಯಾಗಿ ತಮ್ಮ ಕೌಟುಂಬಿಕ ಪರಿಸರದ ಪ್ರಭಾವ–ಪ್ರೋತ್ಸಾಹವನ್ನು ಕುರಿತು,"ನನ್ನಅಜ್ಜ ಪುದಿಯಾಪುರ ಮಹಮ್ಮದ್ ಅವರು ಕೇರಳದ ಕಾಸರಗೋಡಿನಲ್ಲಿ ಕೃಷಿಕರಾಗಿದ್ದರು. ಹಳೆಯ ಕಾಲದವರಾಗಿದ್ದರೂ ಪ್ರಗತಿಪರಧೋರಣೆ ಹೊಂದಿದ್ದರು. ಅವರಕಾಲದಲ್ಲಿ ಮಹಿಳಾ ಸ್ವಾತಂತ್ರ್ಯದ ಕನಸು ಕಂಡಿದ್ದರು. ನನ್ನತಂದೆ ವಕೀಲರಾಗಿದ್ದು ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಿದ್ದರು. ಏನನ್ನೇ ಆದರೂ ಪ್ರಶ್ನಿಸದೆ ಒಪ್ಪಿಕೊಳ್ಳಬಾರದು ಎಂಬ ಪಾಠವನ್ನು ನನಗೆ ಹೇಳಿಕೊಟ್ಟರು. ನನ್ನನ್ನು ಶಾಲೆಗೆ ಸೇರಿಸಿ ಓದಿಸಿದರು.ಹಾಗಾಗಿನಾನುಪ್ರತಿಯೊಂದನ್ನೂ ಪ್ರಶ್ನಿಸಲು ಆರಂಭಿಸಿದೆ. ಮುಸ್ಲಿಂ ಮಹಿಳೆಗೆ ಪ್ರತಿನಿತ್ಯ ಆಗುವ ಶೋಷಣೆ, ಅವಮಾನಗಳನ್ನು ಸಹಿಸಲಾಗಲಿಲ್ಲ. ನಾನು ಓದಿದ್ದು ಮೆಟ್ರಿಕ್‌ವರೆಗೆ ಮಾತ್ರ. ನನ್ನನ್ನು ಮತ್ತಷ್ಟು ಓದಿಸಬೇಕೆಂಬ ಆಸೆ ತಂದೆಯವರಿಗಿತ್ತು.ಆದರೆ ಅಂದಿನ ಸಮಾಜ ಮುಸ್ಲಿಂ ಹೆಣ್ಣುಮಕ್ಕಳು ಓದುವುದನ್ನು ಸಹಿಸುತ್ತಿರಲಿಲ್ಲ. ಹಾಗಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗಲೇಬೇಕು, ಇದಕ್ಕಾಗಿ ಹೋರಾಡಬೇಕು ಎಂದು ನಾನು ನಿರ್ಧರಿಸಿಕೊಂಡೆ"ಎಂದು ಹಂಚಿಕೊಂಡಿದ್ದಾರೆ.

ಕುಟುಂಬದೊಳಗಿನ ಹೆಣ್ಣಿನಮೇಲಿನ ಶೋಷಣೆಗಳನ್ನು ಪ್ರತಿಭಟಿಸುವ ಕಾದಂಬರಿಗಳನ್ನು ಸಮರ್ಥವಾಗಿರಚಿಸುವಲ್ಲಿ ಸಾರಾ ಸಿದ್ಧಹಸ್ತರು. ಹೆಣ್ಣಿನ ಬಗೆಗಿನ ತಾತ್ಸಾರ ಮನೋಭಾವ ಪುರುಷರಲ್ಲಿ ಎಷ್ಟಿದೆ ಎಂದರೆ 'ಹೆಂಗಸರನ್ನು ಚಪ್ಪಲಿಗಳಂತೆ ಬಳಸಿ, ತಲೆಯ ಮೇಲಿಟ್ಟು ಮೆರೆಸಬಾರದು' ಎಂಬ ಸೊಕ್ಕಿನ ಮಾತುಗಳು 'ಚಪ್ಪಲಿಗಳು' ಕಥೆಗೆ ಮೂಲಪ್ರೇರಣೆಯಾಗಿದ್ದು >>3

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಹೊಣೆಯಾರು???..



ಅಳಿಯುತ ಉಳಿದಿಹ ಕೊಂಚವೆ ಕಾಡಿದೆ
ಹುಲಿಗಳು ಪಾಲಿಗೆ ದಟ್ಟವನ
ಛಲದಲಿ ಮಾನವ ಹಸುಗಳ ಮೇಯಲು
ಬಳಸಲು ಮಾಡಿದ ಅತಿಕ್ರಮಣ

ದನವನು ವ್ಯಾಘ್ರವು ಕೊಂದಿತು ತಿನ್ನಲು
ಮನುಜನು ಸೇಡಿನ ರೋಷಕ್ಕೆ
ಮನದಲಿ ಕುದಿಯುತ ವಿಷವನು ಉಣಿಸಿದ
ವನದಲಿ ವಾಸಿಪ ವ್ಯಾಘ್ರಕ್ಕೆ

ಯಾರದು ತಪ್ಪಿದು ಹಸುವನು ಮೇಯಿಸೆ
ಊರಲಿ ಎಲ್ಲಿದೆ ಗೋಮಾಳ
ತೀರಿಸೆ ಹಸಿವನು ವ್ಯಾಘ್ರವು ಕೊಂದಿತು
ಕ್ರೂರತೆ ಬೇಟೆಯ ಜೀವಾಳ

ಗಣನೆಗೆ ಬಾರದ ಗಾಯಗಳೆಷ್ಟಿವೆ
ತಣಿಸಲು ದೊರೆಯದ ಪರಿಹಾರ
ಒಣಗಿಸೆ ಗಾಯವ ಔಷಧ ಹಚ್ಚದ
ಹೊಣೆಯನು ಹೊರುವುದೆ ಸರಕಾರ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಚಿತ್ರ

ನಭದೆತ್ತರಕ್ಕೆ ಹಾರುತಿವೆ ಪಕ್ಷಿಗಳು
ಭಾಸ್ಕರ ಉದಯಿಸಲು ಅರಳುವವು
ಹೂಗಳು
ಹೂದೋಟ ಕಣ್ತುಂಬಿಕೊಳ್ಳುತಿಹರು
ತಾಯಿ ಮಗಳು
ಅಲ್ಲಲ್ಲಿ ಹಾರಾಡುತ್ತಿವೆ ಪತಂಗಗಳು
ಕಲೆಗಾರನ ಕೈಚಳಕದಿ ಕಾಣ ಸಿಗುವವು
ಸುಂದರ ಚಿತ್ರಗಳು.

– ಸುವರ್ಣಾ ಭಟ್ಟ.

## ಆನಂದ ಬಾಣ




## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

29–06–2025 – ಭಾನುವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ವಜ್ರ |
| ಕರಣ | : ವಿಷ್ಟಿ (ಭದ್ರ) |
| ಸೂರ್ಯೋದಯ | : 05:45:25 |
| ಸೂರ್ಯಾಸ್ತ | : 19:15:29 |
| ರಾಹು ಕಾಲ | : 17:34–19:15 |
| ಯಮಘಂಡ ಕಾಲ | : 12:30–14:12 |
| ಗುಳಿಕ ಕಾಲ | : 15:53–17:34 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 28–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1620.20 ಅಡಿ |
| ಒಳ ಹರಿವು | 60023 ಕ್ಯುಸೆಕ್ |
| ಹೊರ ಹರಿವು | 200 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 61.889 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |


ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1581.33 ಅಡಿ |
| ಒಳ ಹರಿವು | 879 ಕ್ಯುಸೆಕ್ |
| ಹೊರ ಹರಿವು | 297 ಕ್ಯುಸೆಕ್ |
| ಸಾಮರ್ಥ್ಯ | 5.154 ಟಿಎಂಸಿ |

# ಫಾಲ್ಕನ್ ಪಲ್ಲಕ್ಕಿಯಲ್ಲಿ ಅಂತರಿಕ್ಷದ ಅಂಗಳಕ್ಕೆ ಶುಭಾಂಶು

ಭಾರತದ ಬಾಹ್ಯಾಕಾಶ ಕನಸಿನಲ್ಲಿ ಬಹುದೊಡ್ಡ ಹೆಜ್ಜೆ..! ಹೌದು ಸ್ನೇಹಿತರೆ, ಸ್ವರ್ಗ ಎಂದರೆ ಈವತ್ತಿಗೂ ತಲೆಯೆತ್ತಿ ಆಕಾಶದೆಡೆಗೆ ನೋಡುವ ನಮಗೆ ಒಂದರ್ಥದಲ್ಲಿ ಆಕಾಶ ಎನ್ನುವುದು ಅತ್ಯಂತ ಶ್ರೇಷ್ಠ ಮತ್ತು ಯಾವತ್ತೂ ತಣಿಯಾಲಾಗದ ಕುತೂಹಲ ಎಂದರೆ ತಪ್ಪಾಗಲಾರದು. ನಮ್ಮ ಪ್ರಾಚೀನ ಕಾಲದಿಂದಲೂ ಮಾನವರು ಆಕಾಶದ ಕಡೆಗೆ ಅದಮ್ಯ ಆಕರ್ಷಣೆಯನ್ನು ಹೊಂದಿರುವುದು ಅಧ್ಯಯನದಿಂದ ಕಂಡುಬರುತ್ತದೆ. ಇನ್ನೂ ಮನುಷ್ಯನ ಜೀವಿತಾ ಅವದಿಯಲ್ಲೇ ಅಲ್ಲಿಗೆ ಹೋಗಿ ಬರುವುದು ಎಂದರೆ ಅದೊಂದು ಅದ್ಭುತವೇ ಸರಿ, ಸ್ವರ್ಗದ ಬಾಗಿಲನ್ನು ಬಡಿದು ಬಂದಂತೆ!.

ಸರಿ ಸುಮಾರು 41 ವರ್ಷಗಳ ನಂತರ ಭಾರತೀಯರೊಬ್ಬರು ಮತ್ತೆ ಆಕಾಶಕ್ಕೆ ನೆಗೆಯಲಿದ್ದಾರೆ ಎನ್ನುವ ವಿಷಯ ಕಳೆದ ಕೆಲವು ವರ್ಷಗಳ ಹಿಂದೆ ಆಗಾಗ ಕಿವಿಗೆ ಅಪ್ಪಳಿಸಿತಿದ್ದಾಗ ಒಂದು ರೀತಿಯ ರೋಮಾಂಚನವಾಗುತ್ತಿತ್ತು. ಅದರಲ್ಲೂ ಇತ್ತೀಚಿಗಂತು ಸುನಿತಾ ವಿಲಿಯಮ್ಸ್ ಅವರ ಅಂತರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣದಲ್ಲಿನ ವಿವಿಧ ದೈನಂದಿನ ಚಟುವಟಿಕೆಯ ಕುರಿತ ವಿಡಿಯೋ ತುಣುಕುಗಳು ಮಕ್ಕಳಾದಿಯಾಗಿ ಪ್ರತಿಯೊಬ್ಬರಿಗೂ ವಿಸ್ಮಯ ಮತ್ತು ಬಾಹ್ಯಕಾಶ ನಿಲ್ದಾಣದಲ್ಲಿನ ವಾತಾವರಣದ ಇಂಚಿಂಚೂ ಮಾಹಿತಿಯನ್ನು ಉಣಬಡಿಸುತ್ತು. ಇನ್ನು ವಿಜ್ಞಾನ ಪ್ರಿಯರಿಗಂತೂ ಅಂತರಿಕ್ಷಕ್ಕೆ ಸಂಬಂಧಿಸಿದ ಮಾಹಿತಿಗಳ ರಸದೌತಣವನ್ನೆ ಬಡಿಸಿದಂತ ಅನುಭವ ಅದು.



ಇದೇ ಬುಧವಾರ ಭಾರತೀಯ ಕಾಲಮಾನ 12:01 ಗಂಟೆಗೆ ಸರಿಯಾಗಿ 9, 8, 7, . . . .6 5 4 3.2,1,0 ಎನ್ನುತ್ತಿದಂತೆ ಸ್ಪೇಸ್–ಎಕ್ಸ್ ನ ಫಾಲ್ಕನ್ ನೌಕೆ–9 ಅಮೇರಿಕದಲ್ಲಿರುವ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಬೆಂಕಿಯ ಉಂಡೆಯಂತೆ ಆಕಾಶಕ್ಕೆ ಚಿಮ್ಮಿದ ಗಗನ ನೌಕೆಯಲ್ಲಿ, ಭಾರತೀಯ ವಾಯು ಸೇನೆಯಲ್ಲಿ ಗ್ರೂಪ್ ಕ್ಯಾಪ್ಟನ್ ಆಗಿರುವ ಶುಭಾಂಶು ಶುಕ್ಲಾ–ಪೈಲಟ್ ಹಾಗು ಅಮೆರಿಕಾದ ಪೆಗ್ಗಿ ವಿಟ್ಸನ್–ಮಿಷನ್ ಕಮಾಂಡರ್, ಪೋಲೆಂಡ್ ನ ಸ್ಲಾವೋಸ್ಜ್ ಉಜ್ನಾನ್ಸ್ಕಿ–ಮಿಷನ್ ಸ್ಪೆಷಲಿಸ್ಟ್ ಮತ್ತು ಹಂಗರಿ ದೇಶದ ತಿಬೋರ್ ಕಾಪು–ಮಿಷನ್ ಸ್ಪೆಷಲಿಸ್ಟ್ ಗಗನಯಾತ್ರಿಗಳಾದ ಜೊತೆ ಈ ಯೋಜನೆಯ ಭಾಗವಾಗಿ ಬಾಹ್ಯಾಕಾಶಕ್ಕೆ ಹಾರಿದ್ದು ಈಗ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಾಗಿದೆ.

ಬುಧವಾರ ಸರಿಯಾಗಿ 12:01 ನಿಮಿಷಕ್ಕೆ ನಭಕ್ಕೆ ಚಿಮ್ಮಿದ ನೌಕೆ ಕ್ಷಣಮಾತ್ರದಲ್ಲೆ ಬೆಂಕಿಯ ಉಂಡೆಯಂತೆ ಹೊಳೆಯುತ್ತ ಆಕಾಶ ಗಭವನ್ನು ಸೇರಿಕೊಂಡಿತು. ನಾಲ್ಕೂ ಜನ ಗಗನಯಾತ್ರಿಕರನ್ನು ಹೊತ್ತೊಯ್ದ ಕ್ರೂ ಡ್ರಾಗನ್ ಕ್ಯಾಪ್ಸುಲ್ 28 ಗಂಟೆಗಳ ಹಾರಾಟದ ಬಳಿಕ ಡ್ರ್ಯಾಗನ್ ಕ್ಯಾಪ್ಸುಲ್ ಗುರಿಯನ್ನು ತಲುಪಿ ಯಶಸ್ವಿಯಾಗಿ, ಗುರುವಾರ ಸಂಜೆ ಭಾರತೀಯ ಕಾಲಮಾನ 4:30 ಕ್ಕೆ ಐ ಎಸ್ ಎಸ್ ನೊಂದಿಗೆ ಡಾಕಿಂಗ್ ಆಗಿದೆ ಎನ್ನುವುದರ ಮೂಲಕ 150 ಕೋಟಿ ಭಾರತೀಯರ ಎದೆ ಒಂದು ಕ್ಷಣ ಜುಮ್ಮ ಎನಿಸಿದ್ದು ಈಗ ಇತಿಹಾಸ.

**ಡಾಕಿಂಗ್ ಎಂದರೆ:** ಪ್ರತೀ ಬಾರಿಯೂ ಈ ಶಬ್ದವನ್ನು ಕೇಳಿದಾಗ ಡಾಕಿಂಗ್ ಏನಿರಬಹುದು ಎನ್ನುವ ಕುತೂಹಲ ಕಾಡುತ್ತದೆ ಅಲ್ಲವೇ? ಡಾಕಿಂಗ್ ಎಂದರೆ ಸರಳವಾಗಿ ಹೇಳುವುದಾದರೆ ನಮ್ಮ ಗಗನಯಾನಿಗಳನ್ನು ಹೊತ್ತೊಯ್ದ ನೌಕೆಯನ್ನು ಅಂತರಾಷ್ಟ್ರೀಯ ಅಂತರಿಕ್ಷ ನಿಲ್ದಾಣಕ್ಕೆ ಜೋಡಿಸುವ ಪ್ರಕ್ರಿಯೆ ಅಷ್ಟೇ. ಆದರೆ ಎದು ನೆದೆಯುವುದು ಸರಿ ಸುಮಾರು 400 ಕಿ ಮೀ ಎತ್ತರದ ಬಾಹ್ಯಾಕಾಶದಲ್ಲಿ, ಅದು ಗಂಟೆಗೆ 28000 ಕಿ ಮೀ ವೇಗದಲ್ಲಿ ನಮ್ಮ ಭೂಮ್ಮಿಯನ್ನು ಗಿರಿಕಿ ಹೊಡೆಯುತ್ತಾ..! ಅದು ಕೂಡ ಪ್ರತ್ಯೇಕ ಕಕ್ಷೆಯಲ್ಲಿ ಗಂಟೆಗೆ 28000 ಕಿ.ಮೀ ವೇಗದಲ್ಲಿ ಸಾಗುತ್ತಿದ್ದ ನೌಕೆ ಎಂದರೆ ನೀವು ಉಹಿಸಿಕೊಳ್ಳಬಹುದು. ಇನ್ನು ಇದು ಹಲವಾರು ಹಂತಗಳಲ್ಲಿ ನೆಡೆಯುವಂತಹ ಪ್ರಕ್ರಿಯೆ ಮೊದಮೊದಲು ಐಎಸ್ಎಸ್ ಗೆ ಸಮನಾಂತರವಾಗಿ ನೌಕೆಯನ್ನು ತರುವುದು, ನಂತರ ಸಾಫ್ಟ ಡಾಕಿಂಗ್, ಬಳಿಕ ಹಾರ್ಡ್ ಲ್ಯಾಂಡಿಂಗ್ ಹಾಗು ಹಾರ್ಡ್ ಲ್ಯಾಡಿಂಗ್ ಎನ್ನುವ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಈ ಕ್ಲಿಷ್ಟ ಪ್ರಕ್ರಿಯೆಗೆ ನೌಕೆಯಲ್ಲಿನ ಬೂಸ್ಟರ್ ಮತ್ತು ಥ್ರಸ್ಟರ್ ಬಳಸಿಕೊಳ್ಳಸಿಕೊಳ್ಳುತ್ತಾರೆ. ಹಾಗೆಯೆ ಅಂತರಿಕ್ಷದಲ್ಲಿ ಈ ಎರಡೂ ನೌಕೆಗಳು ಅತ್ಯಂತ ಸಮೀಪಕ್ಕೆ ಬಂದಾಗ ನೌಕೆಯಲ್ಲಿನ ಕಂಪ್ಯೂಟರ್‌ಗಳು ಸ್ವಯಂ ಚಾಲಿತವಾಗಿ ಮೊದಲೇ ನಿರ್ಧರಿಸಿದಂತೆ ಕೆಲವೊಂದು ಹೊಂದಾಣಿಕೆ ಮಾಡಿಕೊಂಡು ಐಎಸ್ಎಸ್‌ಗೆ ಇನ್ನಷ್ಟು ನಿಖರವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಉಳಿದಂತೆ ಇನ್ನೂ ಹತ್ತಿರಕ್ಕೆ ಬಂದಾಗ ನೌಕೆಯಲ್ಲಿನ ಲೇಸರ್ ಆಧರಿತ ಸೆನ್ಸಾರ್ ಮತ್ತು ಕ್ಯಾಮೆರಾಗಳನ್ನು ಬಳಸಿಕೊಂಡು ಮುಂದಿನ ಪ್ರಕ್ರಿಯೆಯನ್ನು ನೆಡೆಸಲಾಗುತ್ತದೆ. ಇಲ್ಲಿಯವರೆಗೆ ಸಾಫ್ಟ ಮತ್ತು ಹಾರ್ಡ್ ಡಾಕಿಂಗ್ ಆದರೆ ಮುಂದಿನ ಹಂತವೇ ಹಾರ್ಡ್ ಲ್ಯಾಂಡಿಂಗ್ ಮತ್ತು ತುಸು ಕಷ್ಟಕರ ಏಕೆಂದರೆ ಈ ಹಂತದಲ್ಲಿ ನೌಕೆಯಲ್ಲಿನ ಹುಕ್‌ಗಳು ಐಎಸ್ಎಸ್‌ನಲ್ಲಿನ ಪೂರ್ವ ಯೋಜಿತ ಹುಕ್‌ಗಳ ಜೊತೆ ಜೋಡಣೆಯಾಗಿ ಪರಸ್ಪರ ಬಿಗಿಯಾಗಿ ಹಿಡಿದುಕೊಳ್ಳುವ ಹಂತ. ಹಾಗಾಗಿ ಇದು ಸ್ವಲ್ಪ ಗಾಳಿಯಲ್ಲೂ ಹಾರ್ಡ್ ಲ್ಯಾಡಿಂಗೇ..!

ಹಾರ್ಡ್ ಲ್ಯಾಡಿಂಗ ನಂತರ ಎರಡೂ ನೌಕೆಗಳ ನಡುವೆ ನೆಡೆವ ಸಂವಹನ, ವಿದ್ಯುತ್ ಸಂಪರ್ಕಗಳು, ಎರಡೂ ನೌಕೆಗಳ ನಡುವಿನ ಒತ್ತಡ ಸ್ಥಿರಗೊಳಿಸುವಿಕೆಗೆ ಸರಿ ಸುಮಾರು ನಾಲ್ಕೈದು ತಾಸುಗಳ ಪ್ರಕ್ರಿಯೆ ನೆಡೆದ ನಂತರ ಐಎಸ್ಎಸ್‌ನ ಬಾಗಿಲು ತೆರೆದುಕೊಳ್ಳುತ್ತದೆ ಮತ್ತು ಗಗನಯಾನಿಗಳು ಅಧಿಕೃತವಾಗಿ ಅಂತರಾಷ್ಟ್ರೀಯಾ ಬಾಹ್ಯಾಕಾಶ ನಿಲ್ದಾಣದ ಹೊಸ ಅತಿಥಿಗಳಾಗುತ್ತಾರೆ.



ಅಂತರಿಕ್ಷಯಾನ ಎಂಥಹ ವಿಸ್ಮಯ ಎಂದರೆ 40 ರಿಂದ 100 ಕಿ ಮೀ ದೂರವನ್ನು ಲಂಬವಾಗಿ ಮೇಲಕ್ಕೆ ಕ್ರಮಿಸಿದರೆ ಸಾಕು ಅದುವೇ ಬಾಹ್ಯಾಕಾಶ! ಈಗಾಗಲೆ 100 ಕಿ ಮೀ ಎತ್ತರದಲ್ಲಿ ಅತೀ–ಕ್ಷೀಣಗುರುತ್ವದಲ್ಲಿ ಕೆಲ ನಿಮಿಷಗಳ ಕಾಲ ಹಾರಾಟ ಮಾಡಿ ಬಂದ ವಿಚಾರ ನಮಗೆಲ್ಲಾ ಗೊತ್ತಿರುವುದೇ ಆಗಿದೆ. ಹಾಗಂತ ಸರಿ ಸುಮಾರು 400 ಕಿ.ಮೀ. ಎತ್ತರದಲ್ಲಿರುವ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐ ಎಸ್ ಎಸ್) ಅದು ಕೂಡ ಶೂನ್ಯ ಗುರುತ್ವದಲ್ಲಿನ ದೈನಂದಿನ ಚಟುವಟಿಕೆಗಳನ್ನು ಮಾಡುವುದು ಹಗುರವಾಗಿ ಪರಿಗಣಿಸುವಂತಿಲ್ಲ.

ಅಂತರಿಕ್ಷ ಬಾಹ್ಯಾಕಾಶ ನಿಲ್ದಾಣ ಎನ್ನುವುದು ಸೂಜಿ ಮೇಲಿನ ನೆಡೆಗೆಯೇ ಸರಿ. ಅಲ್ಲಿ ವಾಸಿಸಲು ಸೂಕ್ತ ತರಬೇತಿ, ಅತಿಯಾದ ಶಿಸ್ತು, ಸಾಕಾಗುವಷ್ಟು ತಾಳ್ಮೆ, ಅಚಲವಾದ ಆತ್ಮ ಸ್ಥೈರ್ಯ ಸಾಧಿಸುವ ಚಲ ಎಲ್ಲವೂ ಬೇಕು. ಈಗಾಗಲೆ ಇಡೀ ಜಗತ್ತು ಒಮ್ಮೆ ಮಮ್ಮಲು ಮರುಗಿದ ಕ್ಷಣಗಳು ಕಲ್ಪನಾ ಚಾವ್ಲಾ ಮತ್ತು ಸುನೀತಾ ವಿಲಿಯಮ್ಸ್ ಅವರ ಘಟನೆಗಳು ಜಗತ್ತಿನ ಸ್ಮೃತಿ ಪಟಲದಲ್ಲಿ ಅಚ್ಚು ಹೊತ್ತಿದಂತೆ ಕುಳಿತಿವೆ. ಅಂತರಿಕ್ಷಯಾನ ಎನ್ನುವುದು ಎಷ್ಟು ಕುತೂಹಲವೋ ಅಷ್ಟೇ ಅನಿಶ್ಚಿತತೆಯಿಂದ ಕೂಡಿದ್ದಾಗಿದೆ.

**ಆಕ್ಸ್–4 ಯೋಜನೆ:** ಆಕ್ಸ್–4 ಎನ್ನುವುದು ಯುಎಸ್ ಮೂಲದ ವಾಣಿಜ್ಯ ಬಾಹ್ಯಾಕಾಶ ಕಂಪನಿಯಾಗಿದೆ. ಇದು ಆಕ್ಸಿಯಮ್ ಸ್ಪೇಸ್‌ನ ನಾಲ್ಕನೇ ಮಾನವ ಬಾಹ್ಯಾಕಾಶ ಹಾರಾಟ ಕಾರ್ಯಾಚರಣೆಯಾಗಿದೆ. ಈ ಯೋಜನೆಯಲ್ಲಿ ಬಹುಮುಖ್ಯವಾಗಿ ವೈಜ್ಞಾನಿಕ ಸಂಶೋಧನೆ ಮತ್ತು ಅಂತರರಾಷ್ಟ್ರೀಯ ಸಹಕಾರವನ್ನು ಕೇಂದ್ರೀಕರಿಸುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐ ಎಸ್ ಎಸ್) 14 ದಿನಗಳ ಕಾಲ ವಿವಿಧ ವೈಜ್ಞಾನಿಕ ಕಾರ್ಯಾಚರಣೆಗಳಿಗಾಗಿ ರೋಪಿಸಿರುವ ಯೋಜನೆಯಾಗಿದೆ.

ಆಕ್ಸಿಯಮ್–4 ಎನ್ನುವ ಈ ಕಾರ್ಯಾಚರಣೆಯು ಬಹುಮುಖ್ಯವಾದ 31 ದೇಶಗಳ ವಿವಿಧ 60 ಕ್ಕೂ ಹೆಚ್ಚು ವೈಜ್ಞಾನಿಕ ಪ್ರಯೋಗಗಳನ್ನು ನಾಸಾ–ಬಾಹ್ಯಾಕಾಶ ಮೂಲಸೌಕರ್ಯ ಮತ್ತು ಉಡಾವಣಾ ಬೆಂಬಲದೊಂದಿಗೆ, ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಮತ್ತು ಭಾರತ, ಪೋಲೆಂಡ್ ಹಾಗು ಹಂಗೇರಿ ದೇಶಗಳು ಈ ಪ್ರಯೋಗದ ಪಾಲುದಾರ ರಾಷ್ಟಗಳಾಗಿ ಕೈಗೊಂಡ ಯಾತ್ರಿಯಾಗಿದೆ.

**ಆಕ್ಸಿಯಮ್ ಸ್ಪೇಸ್–4 ಕಾರ್ಯಚಟುವಟಿಕೆಯ ಗುರಿ ಉದ್ದೇಶಗಳು:**

ಒಟ್ಟು 31 ದೇಶಗಳ ಸುಮಾರು 60 ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವ ಬಹುದೊಡ್ಡ ಜವಾಬ್ದಾರಿಯನ್ನು ಈ ಕಾರ್ಯಚರಣೆ ಹೊಂದಿದೆ. ಅದರಲ್ಲೂ ವಿಶೇಷವಾಗಿ ಸೂಕ್ಷ್ಮ ಗುರುತ್ವಾಕರ್ಷಣೆಯಲ್ಲಿ ಮಾನವ ಆರೋಗ್ಯ, ಜೀವನ ಮತ್ತು ವಸ್ತು ವಿಜ್ಞಾನಗಳಿಗೆ ಸಂಬಂಧಿಸಿದ ಪ್ರಯೋಗಗಳು ಒಂದು ಕಡೆಯಾದರೆ. ಭೂಮಿಯ ವೀಕ್ಷಣೆ ಮತ್ತು ಬಾಹ್ಯಾಕಾಶದಲ್ಲಿನ ಜೀವಶಾಸ್ತ್ರಕ್ಕೆ ಸಂಬಂದಿಸಿದ ಪ್ರಯೋಗಗಳನ್ನು ಮಾಡಹೊರಟಿದೆ. ಇವುಗಳ ಮಧ್ಯ ಅಂತರರಾಷ್ಟ್ರೀಯ ಶೈಕ್ಷಣಿಕ ಸಂಪರ್ಕ ಮತ್ತು ಉದ್ಯಮ ಸಹಯೋಗವನ್ನು ಉತ್ತೇಜಿಸಿ. ಕಡಿಮೆ–ಭೂಮಿಯ ಕಕ್ಷೆಗೆ ಸಂಬಂಧಿಸಿದ ಸಂಶೋಧನೆಯನ್ನು ಮುನ್ನಡೆಸುವುದು ಮತ್ತು ಬಾಹ್ಯಾಕಾಶದಲ್ಲಿ ಸಾರ್ವಜನಿಕ–ಖಾಸಗಿ ಪಾಲುದಾರಿಕೆಗಳನ್ನು ಮರು ವ್ಯಾಖ್ಯಾನಿಸುವುದು ಈ ಯೋಜನೆಯ ಬಹು ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

**ಭಾರತಕ್ಕೆ ಏಕೆ ಈ ಯಾನ ಮಹತ್ವವಾಗಿದೆ:**

ಬಹು ಮುಖ್ಯವಾಗಿ ಭಾರತದ ಅಂತರಿಕ್ಷ ಸಂಸ್ಥೆ ಇಸ್ರೋದ 2040 ರ ಗಗನ್‌ಯಾನ್ ಮಿಷನ್‌ನ ಗೆ ಪೂರಕವಾದ ಮಾಹಿತಿಯನ್ನು ಕಲೆಹಾಕುವುದು. ಇಸ್ರೋದ ಮುಂದಿನ ಮಾನವ ಸಹಿತ ಅಂತರಿಕ್ಷ ಅಧ್ಯನಕ್ಕೆ ಈ ಅನುಭವ ಮಹತ್ವವಾದ ದತ್ತಾಂಶಗಳನ್ನು ಒದಗಿಸಬಲ್ಲದು. ಹಾಗೆಯೆ ಭಾರತದ ಅಂತರಿಕ್ಷಕ್ಕೆ ಸಂಬಂಧಿಸಿದಂತೆ ಸ್ಥಳೀಯ ಕಾರ್ಯಾಚರಣೆಗಳಿಗೆ ಉತ್ತೇಜನ ಸಿಗುವುದರಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ. ಆಕ್ಸಿಯಮ್ ಸ್ಪೇಸ್–4 ರಿಂದ ಪಡೆದ ದತ್ತಾಂಶಗಳು ಮತ್ತು ಈ ಕಾರ್ಯಚರಣೆಯಲ್ಲಿ ಕಲಿತ ಜ್ಞಾನವು, ಭಾರತದ ಮುಂದಿನ ಸ್ಪಾಡೆಕ್ಸ್ ಕಾರ್ಯಾಚರಣೆಗಳು ಮತ್ತು ಭಾರತೀಯ ಸ್ವಂತ ಅಂತರಿಕ್ಷ ನಿಲ್ದಾಣ ಸುಮಾರು 2040 ರ ಹೊತ್ತಿನ ಯೋಜನೆಗಳಿಗೆ ಡಾಕಿಂಗ್ ನಂತಹ ಕಾರ್ಯವಿಧಾನಗಳನ್ನು ತಿಳಿಸುವಲ್ಲಿ ಸಹಾಯಕವಾಗುತ್ತದೆ. ರಾಜತಾಂತ್ರಿಕವಾಗಿ ಭಾರತದ ಹೆಸರು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಮುನ್ನೆಲೆಗೆ ಬರುವುದಲ್ಲದೆ, ಜಾಗತಿಕವಾಗಿ ಅತ್ಯಂತ ಸೂಕ್ಷ್ಮ ವಿಚಾರಗಳಾದ ಆಕಾಶ, ಆಕಾಶಕಾಯಗಳು, ಗುರುತ್ವಾಕರ್ಷಣೆ ಮತ್ತಿತರ ಸಂಶೋಧನೆಗೆ ಜಾಗತಿಕ ಮಟ್ಟದಲ್ಲಿ ಕೊಡುಗೆ ನೀಡುವ ಜೊತೆಗೆ ಅಂತರಿಕ್ಷದಲ್ಲಿ ಸಶಕ್ತ ರಾಷ್ಟಗಳ ಸ್ಥಾನದಲ್ಲಿ ನಿಲ್ಲುಸುತ್ತದೆ. ವಾಣಿಜ್ಯಾತ್ಮಕವಾಗಿ ಜಾಗತಿಕ ಹೂಡಿಕೆಗೆ ಅವಕಾಶದ ಹೆಬ್ಬಾಗಿಲೇ ತೆರೆದುಕೊಳ್ಳುತ್ತದೆ.


ಜೊತೆಗಿನ್ನೂ ಚಂದಮಾನ ಅಂಗಳಕ್ಕೆ ಒಂದು ದಿನದ ಪ್ರವಾಸಕ್ಕೆ ಸ್ಥಳ ಗೊತ್ತುಮಾಡಿ ಮಾನವ ಪೀಳಿಗೆ ದಾಂಗುಡಿ ಇಡುವುದೊಂದೇ ಬಾಕಿ ಅನ್ನಿ. "ಇದು ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಆರಂಭ ಜೈ ಹಿಂದ, ಜೈ ಭಾರತ್" ಎನ್ನುವ ಶುಭಾಂಶು ಶುಕ್ಲ ಅವರ ನುಡಿ ಮತ್ತೆ ಮತ್ತೆ ನೂರೈವತ್ತು ಕೋಟಿ ಭಾರತಿಯರ ಎದೆಯಲ್ಲಿ ಸದಾ ಕಾಲ ಕಂಪಿಸಿತ್ತಿರಲಿ.. ಜೈ ವಿಜ್ಞಾನ.

# ಮಹಿಳೆಯರಿಗೆ ಆತ್ಮಸ್ಥೈರ್ಯ ತಂದ ಸಾರಾಅಬೂಬಕ್ಕರ್

ಎರಡನೇ ಪುಟದಿಂದ

ಶ್ರೇಷ್ಠ ಕಥೆಯಾಗಿದೆ. ಧರ್ಮ–ದೇಶಗಳ ಭೇದವಿಲ್ಲದೆ ಭಾಗಿಯಾದ ಸೈನಿಕರೆಲ್ಲರಿಗೂ, ಅವರ ಕುಟುಂಬ ವರ್ಗದವರಿಗೂ, ದೇಶಕ್ಕೂ ನಾನಾ ಸಂಕಷ್ಟಗಳನ್ನುಂಟು ಮಾಡುವ ಯುದ್ಧದ ಭೀಕರತೆಯನ್ನು ಸಾರಾ ಅವರ 'ಯುದ್ಧ' ಕತೆ ಪರಿಣಾಮಕಾರಿಯಾಗಿ ಚಿತ್ರಿಸಿದೆ. ಯುದ್ಧದಲ್ಲಿ ನೊಂದವರು ಧರ್ಮ ಭಿನ್ನತೆ, ದೇಶ ಭಿನ್ನತೆ, ವೈರಿ–ಮಿತ್ರ ಎಂಬುದನ್ನೆಲ್ಲ ಮರೆತು ಪರಸ್ಪರ ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ತೊಡಗುವ ಮಾನವೀಯ, ಮೌಲ್ಯಯುತ ನಡವಳಿಕೆಗಳು ಎಲ್ಲಕಾಲದ, ಎಲ್ಲ ದೇಶಗಳ ಅಗತ್ಯಗಳಾಗಿವೆ ಎಂಬುದನ್ನು ಕಟ್ಟಿಕೊಡುತ್ತದೆ.

'ಚಂದ್ರಗಿರಿಯತೀರದಲ್ಲಿ' ಮನಮುಟ್ಟುವಂತಹ ಕಾದಂಬರಿ.ಇಬ್ಬರು ಪ್ರೇಮಿಗಳು ಪರಸ್ಪರ ಆತ್ಮೀಯತೆಯಿಂದ ಇರುವ ಸಮಯದಲ್ಲಿ ಮೂರ ನೆಯವರ ಆಗಮನದಿಂದ, ಮತ್ತಿನ್ಯಾ ರದ್ದೋ ಸೇಡಿನಕಿಡಿಯಿಂದ ಮುಗ್ಧರಾದಇವರಿಬ್ಬರುದೂರ ವಾಗುತ್ತಾರೆ. ಹೀಗೆ ಕಥೆಯನ್ನು ಓದುತ್ತಾ ಹೋದಂತೆ, ಮನಸ್ಸು ವಿಹ್ವಲತೆಗೆ ಒಳಗಾಗುತ್ತದೆ. ಆದರೆ, ಹಿರಿಯರ ಸಮ್ಮತಿಯಿಂದ ಅವರೇ ನಿಶ್ಚಯಿಸಿ ಮಾಡಿಸಿದ ಮದುವೆ ಗಂಡ–ಹೆಂಡತಿಯ ಅನ್ಯೋನ್ಯತೆಯನ್ನು ಕಂಡು ಮನಸ್ಸು ಪುಲಕಿತಗೊಳ್ಳುತ್ತದೆ. ಆದರೆ ಅವರ ಸಂತೋಷವೂ ತಾತ್ಕಾಲಿ ಕವಾಯಿತು. ದೀರ್ಘಕಾಲದವರೆಗೆ ಇವರಿಬ್ಬರನ್ನು ಬದುಕಿ ಬಾಳಲು ಬಿಡದಂತೆ ಬಿರುಗಾಳಿಯೊಂದು ಬಂದಪ್ಪಳಿಸಿತು. ಹೆಂಡತಿಯ ತಂದೆ(ಮಾವ) ಮುಂಗೋಪಿಯೂ, ಅಹಂಕಾರಿಯೂ ಆಗಿದ್ದರು. ಸಹೃದಯಿಯಾದ ಅಳಿಯ ನಿಂದಾದ ಸಣ್ಣ ನಿರ್ಲಕ್ಷ್ಯವನ್ನೇದೊಡ್ಡದು ಮಾಡಿ ಮಗಳನ್ನೇ ಅವರಿಂದ ಬೇರ್ಪಡಿಸಿ ಅವಳ ಬಾಳಿಗೆ ಮುಳುವಾಗುತ್ತಾನೆ. ಗಂಡ ಒಳ್ಳೆಯವನಾದರೂ ಪ್ರತಿಷ್ಠೆಯೇ ಪ್ರಾಮುಖ್ಯವಾಗಿ ಬಿಡುತ್ತದೆ. ತಂದೆಯ ಮಾತಿನಂತೆತನ್ನ ಗಂಡನಿಗೆ 'ತಲಾಕ್' ನೀಡಿ ಬೇರೊಬ್ಬನೊಂದಿಗೆ ನಿಖಾಮಾಡಿಕೊಳ್ಳಲು ಮನಸ್ಸಿಲ್ಲ. ಅದನ್ನು ತಂದೆಯ ಬಳಿ ಹೇಳಲು ಧೈರ್ಯ ಸಾಲದೇಗಂಡನ ಕಂಡುತನ್ನ ಮನದಭಿಲಾಷೆಯನ್ನು ಹೇಳಲು ದಾರಿಯಿಲ್ಲದೆ ಇಕ್ಕಟ್ಟಿಗೆ ಸಿಲುಕಿದಳು. ಇದ್ದ ಒಬ್ಬ ಕಂದನನ್ನು ಅತ್ತೆ ಬಂದು ಕಸಿದು ಕೊಂಡು ಹೋದರು. ಅವಳಿಗೆ ತಿಳಿಯದೆಯೇ ತಂದೆಯ ಕುತಂತ್ರದಿಂದ ಗಂಡನಿಂದ ತಲಾಕ್ ಪಡೆದಅವಳು ಮತ್ತೆಂದೂ ಯಾರಿಗೂ ಬೇಡದವಳಾಗಿ, ಜಿಗುಪ್ಸೆಯೊಂದಿಗೆ ಕೊನೆಗೆ ಚಂದ್ರಗಿರಿಯ ನದಿಯ ಮೊರೆಹೋದಳು. ಕರುಣೆಯೇ ಇಲ್ಲದ ತಂದೆ, ಗಂಡ ಮತ್ತು ಸಮಾಜವನ್ನು ಎದುರಿಸಲು ಮುಗ್ಧೆಯಾದ ಆಸಿಫ್‌ಳಿಂದ ಸಾಧ್ಯವಾಗದೆತನ್ನ ಅಂತ್ಯವನ್ನು ತಾನೇ ನಿರ್ಧರಿಸಿಕೊಂಡಳು.




ಸಾರಾ ಅವರು ತಮ್ಮ ಕೃತಿಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಅಗತ್ಯವೆಂದು ನಿರಂತರವಾಗಿ ಪ್ರತಿಪಾದಿಸಿ ದ್ದಾರೆ. 'ಹೆಣ್ಣುಮಕ್ಕಳು ಪ್ರಾಣಿಗಳು, ಹೆರಲುಇರುವ ಯಂತ್ರಗಳು'ಎಂದು ಬಿಂಬಿಸಿ ರುವ ಸಮಾಜ ನಮ್ಮದು. ಮೂಲ ಇಸ್ಲಾಂನಲ್ಲಿ ಹೆಣ್ಣಿಗೆ ಅಪಾರ ಗೌರವವಿದೆ. ಆದರೆ ಸೌದಿ ಅರೇಬಿಯಾ ಮೂಲದ 'ವಹಾಬಿಸಂ'ಅನ್ನು ಮುಂದಿಟ್ಟುಕೊಂಡು ವಿಶ್ವದನಾನಾ ಭಾಗಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಬಾರದು ಎಂದೆಲ್ಲ ವಾದಿಸುತ್ತಿದ್ದಾರೆ. ಕೇರಳ, ಕರ್ನಾಟಕ ಕರಾವಳಿ ಭಾಗದ ಬಹುತೇಕ ಮುಸ್ಲಿಂ ಕುಟುಂಬಗಳಲ್ಲಿನ ತಾಯಂದಿರಿಗೆ ಶಿಕ್ಷಣವಿಲ್ಲ. ಎಲ್ಲೋದೂರದದು ಬೈನಲ್ಲೊ ಮತ್ತೊಂದೆಡೆಯೋ ಕುಳಿತು ಪತಿ ಹಣ ಕಳಿಸುತ್ತಾರೆ. ಅದನ್ನು ಮಕ್ಕಳು ಮಜಾ ಮಾಡುತ್ತಾರೆ. ಹಣವನ್ನು ಸರಿಯಾಗಿ ನಿರ್ವಹಿಸಲು ಬಾರದ ಮಕ್ಕಳು ಕುಟುಂಬ ಸಮೇತ ಹಾಳಾಗಿರುವುದನ್ನು ಸಾರಾರವರು ಕಣ್ಣಾರೆ ಕಂಡಿರುವುದರಿಂದ 'ಮಹಿಳೆಯನ್ನು ಶಿಕ್ಷಣದಿಂದ ವಂಚಿಸುವುದು ಸರಿಯಲ್ಲ'ಎಂದು ಎಚ್ಚರಿಸಿದ್ದಾರೆ.

ತಮ್ಮ ಬರೆವಣಿಗೆಗಳ ಮೂಲಕ ಅರ್ಥವಿಲ್ಲದ ಸಾಮಾಜಿಕ ಕಟ್ಟುಪಾಡುಗಳ ವಿರುದ್ಧ, ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿ ರುವ ನಿರಂತರ ಶೋಷಣೆಗಳ ವಿರುದ್ಧಧ್ವನಿ ಎತ್ತಿದ್ದಾರೆ. ಸತ್ಯವನ್ನು ಹೇಳಲು, ಪ್ರಾಮಾಣಿಕತೆ ಯಿಂದ ಬದುಕಲು ಯಾವಧರ್ಮವೂಅಡ್ಡಿಪಡಿಸುವುದಿಲ್ಲ. ಗಂಡು, ಹೆಣ್ಣು ಎಂಬ ಭೇದವಿಲ್ಲ. ಸಮಾಜದಲ್ಲಿನ ಅನೈತಿಕತೆ, ಅನೀತಿ, ಅಧರ್ಮದ ವಿರುದ್ಧ ಯಾರು ಬೇಕಾದರೂ ಧ್ವನಿಯೆತ್ತುವ ಸಮಾನ ಅವಕಾಶವನ್ನು ಸಂವಿಧಾನ ಎಲ್ಲರಿಗೂ ನೀಡಿರುವಾಗ ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಲ್ಲವೇ ಎಂದು ಪ್ರಶ್ನಿಸಿದ್ದಾರೆ. ಮುಸ್ಲಿಂ ಮೂಲಭೂತವಾದದ ವಿರುದ್ಧದನಿಯೆತ್ತಿ, ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಹೋರಾಟ ಮಾಡಿದ ಸಾರಾ ಅವರ ಧೈರ್ಯ ಮೆಚ್ಚುವಂಥದ್ದು. ಕರ್ನಾಟಕದ ಎಲ್ಲ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವಲ್ಲಿ ಮತ್ತು ಸಮುದಾಯದ ಒಳಗೆ ಹಾಗೂ ಹೊರಗ ಎರಡು ಕಡೆಯೂ ಇಕ್ಕಟ್ಟಿನ ತಂತಿಯ ಮೇಲಿನ ನಡೆಯನ್ನು ಅನುಭವಿಸಿದರೂ, ಸ್ತ್ರೀ ಸಬಲೀಕರಣಕ್ಕಾಗಿ ಹೋರಾಟಮಾಡಿದ ಇಪ್ಪತ್ತನೇ ಶತಮಾನದ ಮೊದಲ ಮುಸ್ಲಿಂ ಲೇಖಕಿ ಸಾರಾ ಅಬೂಬಕ್ಕರ್. 'ಪ್ರಶ್ನಿಸದೆ ಒಪ್ಪಲಾರೆ, ಒಪ್ಪದ್ದನ್ನು ಸಹಿಸಲಾರೆ' ಎಂಬ ಅಚಲ ನಿರ್ಧಾರದ, ಗಟ್ಟಿತನದ ಸಾರಾ ಅಬೂಬಕ್ಕರ್ ಇಂದಿನ ಪೀಳಿಗೆಗೆ ಆದರ್ಶ ಪ್ರಾಯರು. ಸ್ವಸ್ಥ–ಸಾಮರಸ್ಯದಿಂದ ಕೂಡಿದ ಸದೃಢ ಸಮಾಜ ನಿರ್ಮಾಣದಲ್ಲಿ ಸಾರಾ ಅವರ ಚಿಂತನೆಗಳು ಸದಾ ಪ್ರಸ್ತುತ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES


## ಪದಸ್ಫೂರ್ತಿ-01

**ಅ. ಮೇಲಿನಿಂದ ಕೆಳಕ್ಕೆ**

1. ವಿಷದ ಬಾಣ ತಗುಲಿದ್ದು (2)
3. ಹಣಕ್ಕೆ ಇನ್ನೊಂದು ಪದ (2)
5. ಮರದಲ್ಲಿ ಹಕ್ಕಿಗಳ ಚೀರಾಟ ಇಲ್ಲಿ ತಿರುಗಿದೆ (4)
6. ಒಣಮರಕ್ಕೆ ಬಾಧಿಸಿದ್ದು (2)
8 ಪಕ್ಷಿಗೆ ಒಣಮರವನ್ನು ಕಂಡು ಉಂಟಾಗಿದ್ದು ಇಲ್ಲಿ ತಿರುಗಿದೆ (4)

**ಆ. ಎಡದಿಂದ ಬಲಕ್ಕೆ**

1. ಬರೆಹಕ್ಕೆ ಇನ್ನೊಂದು ಹೆಸರು (2)
2. ಬಾವಿಗೆ ಹಗ್ಗ ಇಳಿಸುವುದುಕ್ಕೆ ಸುಲಭ ಸಾಧನ (2)
4. ರೈತ ಇಲ್ಲಿ ನೇಗಿಲು ಹಿಡಿದಿದ್ದಾನೆ (4)
7. ಶ್ರೀಪಂಡಿತಾರಾಧ್ಯ ಶಿವಾಚಾರ್ಯರನ್ನು ಹೀಗೆಂದು ಕರೆಯುತ್ತಾರೆ (5)




ಪ್ರತಿ ಭಾನುವಾರದ ಸಂಚಿಕೆಯಲ್ಲಿ ಪದಸ್ಫೂರ್ತಿ, ಮುಂದಿನ ಸಂಚಿಕೆಯಲ್ಲಿ ಉತ್ತರ

**ಮೈಕ್ರೋ ನ್ಯೂಸ್**

## ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಹಿರೇಸಿಂದೋಗಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಜೀವಶಾಸ್ತ್ರ ವಿಷಯದ ಬೋಧಕರ ಹುದ್ದೆಗೆ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಎಂ.ಎಸ್‌ಸಿ(Botany/ Zoology), ಬಿ.ಎಡ್ ವಿದ್ಯಾರ್ಹತೆ ಹೊಂದಿದ ಅರ್ಹ ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳೊಂದಿಗೆ ಜುಲೈ 04 ರೊಳಗಾಗಿ ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಇವರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಗೆ ಕರ್ನಾಟಕ ವಸತಿ ಶಿಕ್ಷಣ ಸಂಘ ನಿಗದಿಪಡಿಸಿರುವ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಾಲೇಜು ಪ್ರಾಂಶುಪಾಲರು, ಮೊ.ಸಂ: 7411999371 ಗೆ ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.






# ವಿಜ್ರಂಭಣೆ ರಭಸದಲ್ಲಿ ಮೈಸೂರು ದಸರಾ ಚಾರಿತ್ರಿಕ ಮಹತ್ವ ಮರೆಯಾಗಬಾರದು

### ಸಿ.ಎಂ.ಸಿದ್ದರಾಮಯ್ಯ ಸೂಚನೆ | ಹಣ ಖರ್ಚು ಮಾಡುವುದು ವೈಭವ ಅಲ್ಲ ಜನರ ಸುರಕ್ಷತೆ ಮತ್ತು ಅನುಕೂಲಕ್ಕೆ ಪ್ರಥಮ ಆದ್ಯತೆ ಇರಲಿ | ಪೊಲೀಸರು ಜನಸ್ನೇಹಿ ಆಗಿರಬೇಕು. ಪ್ರವಾಸಿಗರೊಂದಿಗೆ ಪ್ರೀತಿಯಿಂದ ವರ್ತಿಸಬೇಕು

**ಹಂಪಿ ಟೈಮ್ಸ್ ಬೆಂಗಳೂರು**

ವಿಜ್ರಂಭಣೆ ರಭಸದಲ್ಲಿ ದಸರಾದ ಚಾರಿತ್ರಿಕ ಮಹತ್ವ ಮರೆಯಾಗಬಾರದು. ಅನಗತ್ಯವಾಗಿ ಹಣ ಖರ್ಚು ಮಾಡುವುದು ವೈಭವ ಅಲ್ಲ. ಜನರ, ಪ್ರವಾಸಿಗರ ಸುರಕ್ಷತೆ ಮತ್ತು ಅನುಕೂಲಕ್ಕೆ ಪ್ರಥಮ ಆದ್ಯತೆ ಇರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಾಡಹಬ್ಬ ಮೈಸೂರು ದಸರಾ–2025 ಆಚರಣೆ ಕುರಿತು ನಡೆದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಸೂಚನೆಗಳನ್ನು ನೀಡಿದರು. ಸರ್ಕಾರದ ಸಾಧನೆಗಳು, ನಾವು ಪ್ರತೀ ಇಲಾಖೆಯಲ್ಲೂ ಜಾರಿ ಮಾಡಿರುವ ಜನಪರ ಕಾರ್ಯಕ್ರಮಗಳು ಜನರಿಗೆ ಸಮರ್ಪಕವಾಗಿ ಮನವರಿಕೆ ಆಗುವ ರೀತಿಯಲ್ಲಿ ಯೋಜನೆ ರೂಪಿಸಬೇಕು.

ಈ ಬಾರಿ ರಾಜ್ಯದಾದ್ಯಂತ ಮಳೆ ಬೆಳೆ ಉತ್ತಮವಾಗಿದ್ದು, ನದಿ, ಕೆರೆಗಳು ತುಂಬಿದ್ದು, ವೈಭವದಿಂದ ದಸರಾ ಆಚರಿಸಲಾಗುವುದು.

* ಸೆಪ್ಟಂಬರ್ 22ರಂದು ದಸರಾ ಹಬ್ಬಕ್ಕೆ ಚಾಲನೆ ದೊರೆಯಲಿದ್ದು, ಅಕ್ಟೋಬರ್ 2ರಂದು ವಿಜಯದಶಮಿ, ಜಂಬೂ ಸವಾರಿ ನಡೆಯಲಿದೆ. ದಸರಾ ಈ ಬಾರಿ 10ದಿನಗಳ ಬದಲು 11ದಿನಗಳ ಕಾಲ ನಡೆಯಲಿದೆ.
* ದಸರಾಕ್ಕೆ ತನ್ನದೇ ಆದ ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿದ್ದು, ಇದಕ್ಕೆ ಪೂರಕವಾಗಿ ದಸರಾ ಆಚರಿಸಲಾಗುವುದು.
* ವಿಶ್ವ ವಿಖ್ಯಾತ ದಸರಾದ ಪರಂಪರೆಯನ್ನು ಮುಂದು ವರೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
* ಕಳೆದ ವರ್ಷ ದಸರಾ ಆಚರಣೆಗೆ ಒಟ್ಟು ರೂ. 40 ಕೋಟಿ ಅನುದಾನ ಒದಗಿಸಲಾಗಿತ್ತು. ಈ ಬಾರಿ ಅದ್ದೂರಿಯಾಗಿ ದಸರಾ ಆಚರಣೆಗೆ ಬೇಕಾದಷ್ಟು ಅನುದಾನವನ್ನು ಒದಗಿಸಲಾಗುವುದು.
* ಸರ್ಕಾರದ ಸಾಧನೆಗಳನ್ನು ಮತ್ತು ಇಲಾಖಾ ಕಾರ್ಯಕ್ರಮಗಳನ್ನು ಸರಿಯಾಗಿ ಪ್ರತಿಬಿಂಬಿಸುವಂತಹ ವಸ್ತು ಪ್ರದರ್ಶನ, ಸ್ತಬ್ಧಚಿತ್ರ ಪ್ರದರ್ಶನ ಆಯೋಜಿಸಬೇಕು. ಅಕ್ಟೋಬರ್ 2ರಂದು ವಿಜಯದಶಮಿ ಬಂದಿರುವ ಕಾರಣ ಸ್ತಬ್ಧ ಚಿತ್ರಗಳಲ್ಲಿ ಗಾಂಧೀಜಿ ವಿಚಾರಧಾರೆಗಳಿಗೆ ಸಹ ಅವಕಾಶ ಕಲ್ಪಿಸಬೇಕು.



* ಕಲ್ಯಾಣ ಕಾರ್ಯಕ್ರಮಗಳು, ಗ್ಯಾರಂಟಿ ಯೋಜನೆಗಳ ಮಾಹಿತಿ ಒದಗಿಸಲು ವ್ಯವಸ್ಥೆ ಮಾಡಬೇಕು.
* ದಸರಾ ಸಂದರ್ಭದಲ್ಲಿ ಜನದಟ್ಟಣೆ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಬೇಕು. 10ಲಕ್ಷಕ್ಕೂ ಹೆಚ್ಚು ಮಂದಿ ಸೇರುವ ಸಂದರ್ಭ ಇದಾಗಿದೆ. ವಿದೇಶಿಗರೂ ಹೆಚ್ಚಿನ ಪ್ರಮಾಣದಲ್ಲಿ ಆಗಮಿಸುತ್ತಾರೆ. ಯಾವುದೇ ಕಾರಣಕ್ಕೂ ಅನಾಹುತ ಸಂಭವಿಸದಂತೆ ಎಲ್ಲಾ ಕಡೆ ಮುನ್ನೆಚ್ಚರಿಕೆ ವಹಿಸಬೇಕು.
* ಅರಮನೆ ಮುಂಭಾಗದಲ್ಲಿ ಆಸನದ ವ್ಯವಸ್ಥೆಯನ್ನು ಕಳೆದ ಬಾರಿಗಿಂತ ಈ ಬಾರಿ ಕಡಿಮೆ ಮಾಡಿ ಜನದಟ್ಟಣೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಿ.
* ಪೊಲೀಸರು ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಬೇಕು. ಕಾನೂನು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು.
* ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆ, ಕೆಆರ್‌ಎಸ್‌ಗೆ ಹೋಗುವ ರಸ್ತೆ ಸೇರಿದಂತೆ ಎಲ್ಲಾ ಪ್ರಮುಖ ರಸ್ತೆಗಳನ್ನು ದುರಸ್ತಿ ಮಾಡುವ ಕಾರ್ಯವನ್ನು ಈಗಲೇ ಆರಂಭಿಸಬೇಕು.
* ಜಾನಪದ ಕಲೆಗಳನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸಬೇಕು. ಜಾನಪದ ಪ್ರದರ್ಶನದಲ್ಲಿ ಏಕತಾನತೆ ಇಲ್ಲದಂತೆ ನೋಡಿಕೊಳ್ಳಬೇಕು.
* ಕಳೆದ ಬಾರಿ ವಿದ್ಯುತ್ ದೀಪ ಅಲಂಕಾರವನ್ನು ವೈಭವದಿಂದ ಮಾಡಲಾಗಿತ್ತು. ಇದಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಬಾರಿಯೂ ವಿದ್ಯುತ್ ದೀಪಾಲಂಕಾರವನ್ನು ಇನ್ನಷ್ಟು ಉತ್ತಮವಾಗಿ ಮಾಡಬೇಕು.
* ಎಲ್ಲಾ ಜಿಲ್ಲೆಗಳಿಂದ ಆಗಮಿಸುವ ಸ್ತಬ್ಧಚಿತ್ರಗಳು ವೈವಿಧ್ಯಮಯವಾಗಿರುವಂತೆ ನೋಡಿಕೊಳ್ಳಬೇಕು.
* ವಸ್ತು ಪ್ರದರ್ಶನದ ಮಳಿಗೆಗಳು ಉದ್ಘಾಟನೆ ಸಂದರ್ಭದಲ್ಲೇ ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಂಡಿರಬೇಕು. ಯಾವುದೇ ಮಳಿಗೆಗಳು ಖಾಲಿಯಿರಬಾರದು.
* ಗೋಲ್ಡ್ ಕಾರ್ಡ್ ಯಾವುದೇ ಗೊಂದಲಕ್ಕೆ ಆಸ್ಪದವಾಗದಂತೆ ವಿತರಿಸಬೇಕು.
* ಮೈಸೂರು ನಗರದ ಸೌಂದರ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.
* ದಸರಾ ವೀಕ್ಷಿಸಲು ಆಗಮಿಸುವವರಿಗೆ ಹೆಚ್ಚಿನ ಪ್ರಮಾಣದಲ್ಲಿ ಶೌಚಾಲಯ, ವಾಹನ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು.
* ಈ ಬಾರಿಯೂ ದೊಡ್ಡ ಪ್ರಮಾಣದಲ್ಲಿ ಡ್ರೋಣ್ ಶೋ ಆಯೋಜಿಸಲಾಗುವುದು.
* ದಸರಾ ಸಂದರ್ಭದಲ್ಲಿ ಅಧಿಕಾರಿಗಳು ಜನಸಾಮಾನ್ಯರಿಗೆ ದೊರೆಯುವುದಿಲ್ಲ ಎಂಬ ದೂರುಗ`ಳಿದ್ದು, ಇದಕ್ಕೆ ಈ ಬಾರಿ ಅವಕಾಶ ನೀಡಬಾರದು. ಜನಸಾಮಾನ್ಯರ ಕೆಲಸ ಕಾರ್ಯಗಳು, ಅಭಿವೃದ್ಧಿ ಕಾರ್ಯಗಳು ಯಾವುದೇ ಕಾರಣಕ್ಕೂ ಕುಂಠಿತವಾಗ ಬಾರದು.
* ಈ ಬಾರಿ ದಸರಾ ಉದ್ಘಾಟನೆಗೆ ಯಾರನ್ನು ಆಹ್ವಾನಿಸಬೇಕು ಎಂಬುವುದನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.
* ಕಳೆದ ಬಾರಿ ಅರಮನೆ ಮುಂದೆ ಆಸನ ವ್ಯವಸ್ಥೆಯನ್ನು 54ಸಾವಿರಕ್ಕೆ ಹೆಚ್ಚಿಸಲಾಗಿತ್ತು. ಇದರಿಂದಾಗಿ ಜಂಬೂ ಸವಾರಿ ಸಂದರ್ಭದಲ್ಲಿ ಜನದಟ್ಟಣೆ ಉಂಟಾಗಿತ್ತು. ಈ ಬಾರಿ ಜನದಟ್ಟಣೆ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ. ಯಾವುದೇ ಕಾರ್ಯಕ್ರಮಗಳ ಸ್ಥಳಗಳಲ್ಲಿ ಯಾವುದೇ ಕಾರಣಕ್ಕೂ ಜನದಟ್ಟಣೆಯಾಗದಂತೆ ಎಚ್ಚರಿಕೆ ವಹಿಸಬೇಕು. ಪ್ರಜಾಪ್ರಭುತ್ವ, ಸಂವಿಧಾನ, ಅಭಿವೃದ್ಧಿ, ಉತ್ತಮ ಆಡಳಿತದ ಆಶಯದಲ್ಲಿ ದಸರಾ ಆಚರಿಸಲಾಗುವುದು. – ಡಾ. ಹೆಚ್.ಸಿ.ಮಹದೇವಪ್ಪ
* ಮೈಸೂರು ದಸರಾ ಪ್ರಾಧಿಕಾರ ಸ್ಥಾಪಿಸಿ ಅದರ ಮೂಲಕ ದಸರಾ ವ್ಯವಸ್ಥಿತವಾಗಿ ಆಚರಿಸಬೇಕು. ಕುಳಿತುಕೊಳ್ಳುವ ಸ್ಥಳಾವಕಾಶ ಹೆಚ್ಚಿಸಬೇಕು. ಪಾರ್ಕಿಂಗ್ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಬೇಕು–ತನ್ವೀರ್ ಸೇಠ್
* ಉತ್ತಮ ಮಳೆಯಾಗಿದ್ದು, ರೈತರು ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದಾರೆ. ನದಿಗಳು ತುಂಬಿದ್ದು, ಕೆಆರ್‌ಎಸ್ ಈ ಬಾರಿ ಬೇಗನೇ ತುಂಬಿದೆ. ಜಂಬೂ ಸವಾರಿ ಸಂದರ್ಭದಲ್ಲಿ ಕಲಾ ತಂಡಗಳನ್ನು ಹೊರತುಪಡಿಸಿ ಬೇರೆ ಯಾರೂ ಓಡಾಡಲು ಅವಕಾಶ ಮಾಡಬಾರದು. ಕಲಾ ತಂಡಗಳಲ್ಲಿ ವೈವಿಧ್ಯತೆ ಇರಬೇಕು– ಜಿ.ಟಿ.ದೇವೇಗೌಡ
* ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಇಕೋ ಫ್ರೆಂಡ್ಲಿ ಹಸಿರು ದಸರಾ ಆಚರಿಸಲು ಕ್ರಮ ಕೈಗೊಳ್ಳಬೇಕು. ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಕ್ರಮ ಕೈಗೊಳ್ಳಬೇಕು– ಪುಷ್ಪಾ ಅಮರನಾಥ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಶಿವರಾಜ ತಂಗಡಗಿ, ಕೆ. ವೆಂಕಟೇಶ್, ಸುರೇಶ್ ಭೈರತಿ, ಜಿ.ಟಿ.ದೇವೇಗೌಡ, ರಮೇಶ್ ಬಂಡಿಸಿದ್ದೇಗೌಡ, ಪುಟ್ಟರಂಗಶೆಟ್ಟಿ, ತನ್ವೀರ್ ಸೇಠ್, ಡಾ.ಯತೀಂದ್ರ ಎಸ್, ಡಾ.ಡಿ.ತಿಮ್ಮಯ್ಯ, ಅನಿಲ್ ಕುಮಾರ್, ಎ.ಆರ್. ಕೃಷ್ಣಮೂರ್ತಿ, ಮಧು ಜಿ ಮಾದೇಗೌಡ, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ಡಾ.ಮಾನಸ, ಪುಷ್ಪಾ ಅಮರನಾಥ್, ಅಯೂಬ್ ಖಾನ್, ಅಪರ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತಾ, ಮುಖ್ಯಮಂತ್ರಿ ಅವರ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಮತ್ತಿತರರು ಉಪಸ್ಥಿತರಿದ್ದರು.

# ಸಿ.ಎಸ್.ಆರ್ ಅನುದಾನದಡಿ 2 ಮಾದರಿ ಶಾಲೆಗಳ ನಿರ್ಮಾಣ

### ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿಕೆ | ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ

**ಹಂಪಿ ಟೈಮ್ಸ್ ಕೊಪ್ಪಳ**

ಜನರ ಆರ್ಶಿವಾದದಿಂದ 2024ರ ಜೂನ್‌ನಲ್ಲಿ ಸಂಸದನಾಗಿ ಆಯ್ಕೆಯಾದ ನಂತರ ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುತ್ತಿದೆ ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲಾಡಳಿತ ಭವದಲ್ಲಿರುವ ಲೋಕಸಭಾ ಸದಸ್ಯರ ಕಛೇರಿಯಲ್ಲಿ ತಾವು ಸಂಸದರಾಗಿ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಈ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಎನ್.ಹೆಚ್.ಎ.ಐ ರಸ್ತೆಗಳಲ್ಲಿ ಕೆಲವು ಸಮಸ್ಯೆಗಳಿದ್ದು, ವಿಶೇಷವಾಗಿ ಎನ್.ಹೆಚ್–50ರಲ್ಲಿ ಟೋಲ್‌ಗೇಟ್ ನಿಂದ ಟನಲ್ ಬಳಿ ಬಹಳಷ್ಟು ಅಪಘಾತಗಳಾಗುತ್ತಿದ್ದವು. ಇದರಿಂದ ಪ್ರತಿವರ್ಷ 100 ಜನರ ಸಾವು ಉಂಟಾಗುತ್ತಿತ್ತು. ಈ ಸಮಸ್ಯೆಯನ್ನು ತಡೆಯಲು ಓವರ್ ಬ್ರಿಡ್ಜ್ ಮಾಡಬೇಕೆಂದು ಮಾಜಿ ಸಂಸದರಾದ ಕರಡಿ ಸಂಗಣ್ಣನವರು ಪ್ರಯತ್ನ ಮಾಡಿದ್ದರು. ನಾನು ಸಂಸದನಾದ ನಂತರ ಟೆಂಡರ್ ಮಾಡಿಸಿ, ಹೊಸಲಿಂಗಾಪುರ ಕ್ರಾಸ್, ಹೊಸಳ್ಳಿ ಕ್ರಾಸ್, ಹಿಟ್ನಾಳ್ ಕ್ರಾಸ್ ಮೆತಗಲ್ ಕ್ರಾಸ್ ಸೇರಿದಂತೆ ರೂ. 1190 ಲಕ್ಷಗಳ ಅನುದಾನದಲ್ಲಿ ನಾಲ್ಕು ಫ್ಲೈಓವರ್ ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸ್ತುತ ಅಪಘಾತ ಪ್ರಮಾಣ ಶೇ.70ರಷ್ಟು ಕಡಿಮೆಯಾಗಿದ್ದು, ರಸ್ತೆ ಅಪಘಾತ ಪ್ರಮಾಣವನ್ನು ಶೂನ್ಯಕ್ಕೆ ತರುವ ಪ್ರಯತ್ನ ಮಾಡಲಾಗುವುದು. ರಾಷ್ಟ್ರೀಯ ಹೆದ್ದಾರಿ 50ರಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟಲು ವಾಹನ ವೇಗ ನಿಯಂತ್ರಣ ಮಾಡಲು ಸೆಕ್ಯೂರಿಟಿ ಸಿಸ್ಟಮ್ & ಸಿಸಿಟಿವಿ ಅಳವಡಿಕೆಗಾಗಿ ಕೇಂದ್ರ ಸಾರಿಗೆ ಸಚಿವರಾದ ನಿತೀನ್ ಗಡ್ಕರಿ ಅವರಿಗೆ ಮನವಿ ಮಾಡಿದ್ದು, ಇದಕ್ಕಾಗಿ ರೂ. 2 ಕೋಟಿಗಳನ್ನು ಮಂಜೂರು ಮಾಡಿದ ಕೇಂದ್ರ ರಸ್ತೆ ಸಾರಿಗೆ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ. ಈ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದರು.

ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಕೊಪ್ಪಳ ಜಿಲ್ಲೆಯ ಫಲಿತಾಂಶವು ಕಡಿಮೆಯಿದ್ದು, ಈ ಪ್ರಮಾಣವನ್ನು ಹೆಚ್ಚಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಏಕ ಮಾದರಿಯ ತರಗತಿ ಮತ್ತು ಸ್ಮಾರ್ಟ ಕ್ಲಾಸ್ ನಿರ್ಮಾಣ ಕಾಮಗಾರಿ ಕೈಗೊಳ್ಳ ಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿವೆ. ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಬಿ.ಎಸ್.ಎನ್.ಎಲ್ ಮೂಲಕ ಅಂತರ್ಜಾಲ ಸಂಪರ್ಕ ಕಲ್ಪಿಸಲು ಮನವಿ ಮಾಡಿದ್ದೇವೆ. ಈಗಾಗಲೇ ಪ್ರಾಥಮಿಕ ಹಂತದಲ್ಲಿ 43 ಶಾಲೆಗಳಿಗೆ ಅಂತರ್ಜಾಲ ಸಂಪರ್ಕ ಕಲ್ಪಿಸಲು ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಬಾಕಿ ಶಾಲೆಗಳಿಗೆ ಅಂತರ್ಜಾಲ ಸೌಲಭ್ಯ ಕಲ್ಪಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಅಂಚೆ ಇಲಾಖೆಯಿಂದ ಇನ್ಸೂರೆನ್ಸ್, ಪಿಂಚಣಿ, ಆರ್.ಡಿ ಸೇರಿದಂತೆ ಹಲವಾರು ಪೊಸ್ಟಲ್ ಸೇವೆಗಳು ಸಾರ್ವಜನಿಕರಿಗೆ ಸಿಗುತ್ತಿವೆ. ಆದರೆ, ಅಂಚೆ ಕಛೇರಿಗೆ ಬರುವ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಸಿ.ಎಸ್.ಆರ್ ಅನುದಾನದಲ್ಲಿ ರೂ. 13.50 ಲಕ್ಷಗಳ ವೆಚ್ಚದಲ್ಲಿ ಪ್ರಾಥಮಿಕ ಹಂತದಲ್ಲಿ ಕುಣಿಕೇರಿ ಮತ್ತು ಹಿರೇಬಗನಾಳ ಗ್ರಾಮಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಮತ್ತು ಗುಳದಳ್ಳಿ ಗ್ರಾಮದಲ್ಲಿ ಭೂಮಿ ಪೂಜೆ ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿ 182 ಪೋಸ್ಟ್ ಆಫೀಸ್‌ಗಳಿದ್ದು, ಇವುಗಳ ಅಭಿವೃದ್ಧಿಗಾಗಿ ಜಿಲ್ಲೆಯ ವಿವಿಧ ಕಂಪನಿಗಳಿಗೆ ಮನವಿ ಮಾಡಲಾಗಿದೆ. ಎಕ್ಸ್ ಇಂಡಿಯಾದವರು ಮತ್ತು ಮುಕುಂದ್ಸ್ ಕಂಪನಿಯವರು ತಲಾ ಎರಡು ಅಂಚೆ ಕಛೇರಿಯ ಕಟ್ಟಡಗಳನ್ನು ಮಾಡುತ್ತಿದ್ದಾರೆ ಹಾಗೂ ಕಿರ್ಲೋಸ್ಕರ್ ಮತ್ತು ಕಲ್ಯಾಣಿ ಕಂಪನಿಯವರು ತಲಾ 15 ಅಂಚೆ ಕಛೇರಿಯ ಕಟ್ಟಡಗಳನ್ನು ಮಾಡುವುದಾಗಿ ಹೇಳಿದ್ದಾರೆ. ಈ ವರ್ಷ ಸುಮಾರು 35 ರಿಂದ 40 ಪೋಸ್ಟ್ ಆಫೀಸ್ ಕಟ್ಟಡಗಳನ್ನು ನಿರ್ಮಾಣ ಮಾಡಿ, ಜನರಿಗೆ ಅನುಕೂಲ ಮಾಡಿಕೊಡ ಲಾಗುವುದು ಎಂದು ಹೇಳಿದರು. ಹುಲಿಗೇಮ್ಮದೇವಿ ದೇವಸ್ಥಾನ ಸಮಗ್ರ ಅಭಿವೃದ್ಧಿ ಗಾಗಿ ಪ್ರವಾಸೋದ್ಯೋಮ ಇಲಾಖೆ ಯಿಂದ ಕೇಂದ್ರ ಸರ್ಕಾರದ ಪ್ರಸಾದ್–2 ಯೋಜನೆಯಡಿ 169 ಕೋಟಿ ರೂ.ಗಳ ಅನುದಾನದಲ್ಲಿ ವಿಸೃತ ಯೋಜನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಎಂದು ಹೇಳಿದರು.



ಸಿಂಧನೂರ ಪಟ್ಟಣದಲ್ಲಿ ಹೊಸ ಕೇಂದ್ರಿಯ ವಿದ್ಯಾಲಯ 2025–26ನೇ ಸಾಲಿನ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಅನುಮೋದನೆ ಯಾಗಿದೆ. ಪವರ್ ಗ್ರಿಡ್ ಕಾರ್ಪೋರೇಷನ್ ಇವರಿಂದ ಸಿ.ಎಸ್.ಆರ್ ಅನುದಾನದಡಿ 2 ಮಾದರಿ ಶಾಲೆಗಳ ನಿರ್ಮಾಣ, ಲೋಕೋಪಯೋಗಿ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ–150ಎ ರಲ್ಲಿ 7 ಮೇಲ್ಸೆತುವೆ ನಿರ್ಮಾಣ ಕಾಮಗಾರಿಗಳಿಗೆ ರೂ. 23.88 ಕೋಟಿ ಅನುದಾನದಡಿ ಗುಡದೂರ, ರಂಗಾಪೂರ, ಮುದ್ದಾಪೂರ ಕ್ರಾಸ್, ಎಲೆಕುಡ್ಲಗಿ, ಬಸಾಪೂರ, ಕಲ್ಲೂರ ಮತ್ತು ಸಿಂಧನೂರಗಳಲ್ಲಿ ಮೇಲ್ಸೆತುವೆ ನಿರ್ಮಾಣ ಕಾಮಗಾರಿ ಮಾಡಲಾಗುತ್ತದೆ. ಇದರ ಭೂಮಿ ಪೂಜೆ ಮಾಡುವುದು ಬಾಕಿ ಇರುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸಿರಗುಪ್ಪ ಪಟ್ಟಣದಲ್ಲಿ ಒನ್ ಟೈಮ್ ಇಂಪ್ರುಮೆಂಟ್ ರೋಡ್ (Onetimeimprovement Road) ನಿರ್ಮಾಣ ಕಾಮಗಾರಿಗಾಗಿ ರೂ. 60 ಕೋಟಿ ವೆಚ್ಚದಲ್ಲಿ ಕೊಪ್ಪಳದಲ್ಲಿ ಈಗಾಗಲೇ ನಿರ್ಮಾಣ ಮಾಡಲಾಗಿರುವ ಸಿಮೆಂಟದ ರಸ್ತೆ ಮಾದರಿಯಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲಾ ಗುವುದು. ನಬಾರ್ಡ ವತಿಯಿಂದ ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮೆತಗಲ್ ಗ್ರಾಮದಲ್ಲಿ ಆಹಾರ ಸಂಸ್ಕರಣ ಘಟಕವನ್ನು 4 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದ್ದು, ಕಾಮಗಾರಿ ಪ್ರಾರಂಭಿಸುವುದು ಬಾಕಿ ಇದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಸದರ ಆಪ್ತ ಸಹಾಯಕರಾದ ಅರುಣ, ವೀರಭದ್ರಪ್ಪ ನಾಯಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುರೇಶ್ ಜಿ. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಯುವ ಸಂಘಗಳಿಂದ ಅರ್ಜಿ ಆಹ್ವಾನ

### ಕ್ರೀಡಾ ಸಾಮಾಗ್ರಿಗಳನ್ನು ಪೂರೈಕೆ | ಜು.19 ರೊಳಗೆ ಅರ್ಜಿ ಸಲ್ಲಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಗ್ರಾಮೀಣ ಯುವಜನತೆ ಆರೋಗ್ಯಕರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ಸೃಜಿಸಲು ಯುವ ಚೈತನ್ಯ ಎಂಬ ನೂತನ ಯೋಜನೆಯಡಿ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದ್ದು, ಯುವ ಸಂಘಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಯುವ ಸಂಘವು ಕನಿಷ್ಠ 25 ಯುವ ಜನರನ್ನು ಸದಸ್ಯರನ್ನಾಗಿ ಹೊಂದಿರಬೇಕು. ಎಲ್ಲಾ ಸದಸ್ಯರ ವಯೋ ಮಿತಿಯು 18 ರಿಂದ 35 ವರ್ಷದೊಳಗಿರಬೇಕು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮಾನ್ಯತೆ ಪಡೆದಿರಬೇಕು. ಯುವ ಸಂಘಗಳು ಇಲಾಖೆಯಿಂದ ಮಾನ್ಯತೆ ಪಡೆಯಲು ಸಂಘಗಳ ನೋಂದಣಿ ಕಾಯ್ದೆಯಡಿ ಮಾನ್ಯತೆ ಪಡೆದಿರಬೇಕು. ಯುವ ಸಂಘವು ಕಡ್ಡಾಯವಾಗಿ ಚಾಲ್ತಿಯಲ್ಲಿರಬೇಕು. ಅಗತ್ಯ ದಾಖಲೆಗಳೊಂದಿಗೆ ಜುಲೈ 19 ರೊಳಗಾಗಿ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08539–230121 ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


**ಶ್ರೀ ರಾಮಲಲ್ಲಾ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**

ಡೋರ್ ನಂ. 247, 26ನೇ ವಾರ್ಡ್, ಹಳೆಯ ತರಕಾರಿ ಮಾರುಕಟ್ಟೆ ರಸ್ತೆ, ಹೊಸಪೇಟೆ–583201, ವಿಜಯನಗರ ಜಿಲ್ಲೆ

**ಬೇಕಾಗಿದ್ದಾರೆ**

| ಕ್ರ.ಸಂ. | ಹುದ್ದೆ | ವಿದ್ಯಾರ್ಹತೆ | ಹು.ಸಂಖ್ಯೆ |
|---|---|---|---|
| 1 | ಪಿಗ್ಮಿ ಸಂಗ್ರಹಕಾರ | SSLC/PUC | 1 |

**ವಿಶೇಷ ಸೂಚನೆ:** ಬ್ಯಾಂಕ್/ಇತರೆ ಆರ್ಥಿಕ ಸಂಸ್ಥೆಯಲ್ಲಿನ ಸೇವಾನುಭವ ಇರುವವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಆಸಕ್ತರು ಕಚೇರಿ ಅವಧಿಯಲ್ಲಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಮೊ: 9449764047



* Admissions
* Requirements
* Firm Branding
* Public Notice
* Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper

BOOK NOW! Scan to Read

* Obituary
* Remembrance
* Birthday wish ads
* Events Display &
* Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038